*KAVP210003002013

Presented on : 08-11-2013
Registered on : 08-11-2013
Decided on : 27-06-2026

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬಸವನ ಬಾಗೇವಾಡಿ.**

ಉಪಸ್ಥಿತರು ಃ-
ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಸವನ ಬಾಗೇವಾಡಿ

ಅಸಲು ದಾವಾ ಸಂಖ್ಯೆಃ **496 / 2013**

ದಿನಾಂಕಃ **27** ನೇ ಜೂನ **2026**

ವಾದಿ/ಯರುಃ

**1)** ದೇವಕಿ ಗಂಡ ಸಂಗನಗೌಡ ಬಗಲಿ
ವಯಾ**: 35** ವರ್ಷ**,** ಉದ್ಯೋಗ**:** ಮನೆಕೆಲಸ
ಸಾಃ ಸವನಹಳ್ಳಿ**,** ತಾಃ ವಿಜಾಪುರ

**(**ಪ್ರತಿನಿಧಿಸುವವರುಃ ಶ್ರೀ ಬಿ.ಬಿ .ಬಿರಾದಾರ **,** ನ್ಯಾಯವಾದಿಗಳು**)**

ವಿರುದ್ಧ

ಪ್ರತಿವಾದಿ/ಯರುಃ

**1)** ಲಕ್ಷ್ಮಣ ತಂದೆ ಬಸಪ್ಪ ಚನಗೊಂಡ
ವಯ**: 70** ವರ್ಷ **,** ಉದ್ಯೋಗ**:** ಒಕ್ಕಲುತನ
ಸಾ ಮಸೂತಿ**,** ತಾಃ ಬಸವನ ಬಾಗೇವಾಡಿ **(**ಮೃತ**)**

**2)** ಗಂಗಾಬಾಯಿ ಗಂಡ ಲಕ್ಷ್ಮಣ ಚನಗೊಂಡ
ವಯ**: 60** ವರ್ಷ **,** ಉದ್ಯೋಗ**:** ಮನೆಕೆಲಸ
ಸಾಃಮಸೂತಿ**,** ತಾಃಬಸವನಬಾಗೇವಾಡಿ

**3)** ದುಂಡಪ್ಪ ತಂದೆ ಲಕ್ಷ್ಮಣ ಚನಗೊಂಡ
ವಯ**: 45** ವರ್ಷ **,** ಉದ್ಯೋಗ**:** ಒಕ್ಕಲುತನ
ಸಾಃ ಮಸೂತಿ**,** ತಾಃ ಬಸವನ ಬಾಗೇವಾಡಿ

**4)** ರಾಮಣ್ಣ ತಂದೆ ಲಕ್ಷ್ಮಣ ಚನಗೊಂಡ
ವಯಾ**: 40** ವರ್ಷ**,** ಉದ್ಯೋಗ**:** ಒಕ್ಕಲುತನ
ಸಾಃ ಮಸೂತಿ**,** ತಾಃಬಸವನ ಬಾಗೇವಾಡಿ

**5)** ಗೌರಾಬಾಯಿ ಗಂಡ ಮಲ್ಲಿಕಾರ್ಜುನ ಗುಳೇದಾರ
ವಯಾ**: 42** ವರ್ಷ **,** ಉದ್ಯೋಗ**:** ಮನೆ ಕೆಲಸ**,**
ಸಾಃ ಹೊನ್ನುಟಗಿ**,** ತಾಃ ವಿಜಾಪೂರ

**6)** ಮಲ್ಲಕ್ಕ ಗಂಡ ಚಂದ್ರಶೇಖರ ಮಿಣಜಗಿ
ವಯಾ**: 38** ವರ್ಷ **,** ಉದ್ಯೋಗ**:** ಮನೆಕೆಲಸ
ಸಾಃ ಇವಣಗಿ ರಸ್ತೆಯಲ್ಲಿಯ ತೋಟದ ಮನೆ
ತಾಃ ಬಸವನ ಬಾಗೇವಾಡಿ

(ಪ್ರತಿನಿಧಿಸುವವರುಃ 1 ಮತ್ತು 2 ನೇ ಪ್ರತಿವಾದಿಯರ ಪರ ಶ್ರೀ ಜೆ . ಎಸ್ . ಡಬ್ಲ್ಯೂ.
ನ್ಯಾಯವಾದಿಗಳು ,
( 3 ನೇ ಪ್ರತಿವಾದಿಯ ಪರ ಶ್ರೀ ಎ. ಎಸ್ . ಕೆ. ನ್ಯಾಯವಾದಿಗಳು)
( 4 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಸಿ. ಎಮ್. ಎಚ್ ನ್ಯಾಯವಾದಿಗಳು )

| | | |
|---|---|---|
| 1 | ದಾವಾ ದಾಖಲಿಸಿದ ದಿನಾಂಕ | 08.11.2013 |
| 2 | ದಾವಾ ಸ್ವರೂಪ | ಪಾಲು ವಿಭಾಗ |

| | | | | |
|---|---|---|---|---|
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 17.01.2018 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 27.06.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 12 | 07 | 19 |

**-: <u>ತೀರ್ಪು</u> :-**

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತಿನಲ್ಲಿ ತಮ್ಮ ಪಾಲಿನ 1/6 ಹಿಸ್ಸೆಯನ್ನು ಕೋರಿ ಸಲ್ಲಿಸಿರುತ್ತಾರೆ.

**2.** <u>ವಾದಿಯ ವಾದಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆ:-</u>

➢ ಓರ್ವ ಲಕ್ಷ್ಮಣ ಎಂಬ ಮೂಲ ಪುರುಷನಿದ್ದು, ಆತನಿಗೆ 2 ನೇ ಪ್ರತಿವಾದಿ ಹೆಂಡತಿ, ವಾದಿ ಹಾಗೂ 3 ರಿಂದ 6 ನೇ ಪ್ರತಿವಾದಿಯರು ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ಇರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು, ವಾದಪತ್ರದಲ್ಲಿ ನಮೂದಿಸಿರುವ ಸ್ವತ್ತು ವಾದಿ ಮತ್ತು 3 ನೇ 6 ನೇ ಪ್ರತಿವಾದಿಯರ ತಂದೆಯಾದ ಲಕ್ಷ್ಮಣನ ತಾಯಿ ಕಡೆಯಿಂದ ಬಂದಿರುವ ಆಸ್ತಿಗಳಾಗಿರುತ್ತದೆ. ಸದರಿ 1 ನೇ ಪ್ರತಿವಾದಿಯ ಮರಣಾ ನಂತರ 1 ನೇ ಪ್ರತಿವಾದಿ ಹಾಗೂ ಅವರ ಸಹೋದರರರನಾದ ಕಲ್ಲಪ್ಪರವರ ಮಧ್ಯ ಆದ ವಾಟ್ನಿ ನಾತೆಯಿಂದ ದಾವಾದ ಆಸ್ತಿಯು 1 ನೇ ಪ್ರತಿವಾದಿಗೆ ಬಂದಿರುತ್ತದೆ.

➢ ದಾವಾ ಸ್ವತ್ತು ಈ ಮೇಲ್ಕಂಡವರ ಜೀವಿತಾವಧಿಯಲ್ಲಿ ಯಾವುದೇ ರೀತಿಯ ವಿಭಾಗಕ್ಕೆ ಒಳಪಟ್ಟಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತಿನ ಕುರಿತಾಗಿ ಜಂಟಿ ಸ್ವಾಧೀನತೆಯನ್ನು ಹೊಂದಿ ಅನುಭವಿಸಿಕೊಂಡು ಬರುತ್ತಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಯರು ವಾದಿಯನ್ನು ನಿರ್ಲಕ್ಷಿಸಿ ಒಟ್ಟು ಕುಟುಂಬದ ಸ್ವತ್ತಿನಲ್ಲಿ

ವಾದಿಗೆ ಸಾಗುವಳಿ ಮಾಡಲು ಕೊಡದೆ ತಕರಾರು ಮಾಡಿರುತ್ತಾರೆ. ಈ ಮೇಲ್ಕಂಡ 1 ರಿಂದ 4 ನೇ ಪ್ರತಿವಾದಿಯರ ಕ್ರಮವು ಕಾನೂನು ಬಾಹಿರವಾಗಿರುತ್ತದೆ. ವಾದಿಯು 1 ರಿಂದ 4 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ವಿಭಾಗ ಮಾಡಿ ತನ್ನ ಪಾಲಿನ 1/6 ಹಿಸ್ಸೆಯನ್ನು ನೀಡುವಂತೆ ಕೋರಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಯರು ವಾದಿಯ ಹಿಸ್ಸೆಯನ್ನು ನೀಡಲು ನಿರಾಕರಣೆ ಮಾಡಿರುತ್ತಾರೆ. ಆದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಹಾಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ಡಿಕ್ರಿಗೊಳಿಸಬೇಕೆಂದುಪ ಪ್ರಾರ್ಥಿಸಿಕೊಂಡಿರುತ್ತಾರೆ.

3. ಪ್ರಸ್ತುತ ಈ ಪ್ರಕರಣದಲ್ಲಿ ಪ್ರತಿವಾದಿಯರು ನ್ಯಾಯಾಲಯದ ನೋಟಿಸನ್ನು ಸ್ವೀಕರಿಸಿದ ನಂತರ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ವಾದಿಯ ವಾದ ಪತ್ರಕ್ಕೆ 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರಗಳನ್ನು ಸಲ್ಲಿಸಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಮೇಮೋವನ್ನು ಸಲ್ಲಿಸಿ ಅಳವಡಿಸಿಕೊಂಡಿರುತ್ತಾರೆ. ದಾವೆಯು ಪುನರ ಸ್ಥಾಪಿಸಿದ ನಂತರ (remand) 3 ನೇ ಪ್ರತಿವಾದಿಯು ಪ್ರತ್ಯೇಕ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. 4 ರಿಂದ 6 ನೇ ಪ್ರತಿವಾದಿಯರು ಈ ದಾವೆಯಲ್ಲಿ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

- 1 ನೇ ಪ್ರತಿವಾದಿಯು ವಾದ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ನಡುವಣ ಸಂಬಂಧದ ಕುರಿತು ಒಪ್ಪಿಕೊಂಡಿರುತ್ತಾರೆ. ಅಂತೆಯೇ ದಾವಾ ಸ್ವತ್ತು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬಕ್ಕೆ 1 ನೇ ಪ್ರತಿವಾದಿಯ ತಾಯಿ ಕಡೆಯಿಂದ ಬಂದಿರುತ್ತದೆ ಎಂಬುವುದನ್ನು ಮತ್ತು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯ ತಾಯಿಯ ಮರಣಾ ನಂತರ ವಾರಸಾ ನಾತೆಯಿಂದ ಹಾಗೂ 1 ನೇ ಪ್ರತಿವಾದಿಯ ಖಾಸ ಅಣ್ಣ ಕಲ್ಲಪ್ಪ ರವರ ಮಧ್ಯಯಾದ

ವಾಟ್ನಿ ನಾತೆಯಿಂದ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ.

- 1 ನೇ ಪ್ರತಿವಾದಿ ಒಕ್ಕಲುತನ ಮತ್ತು ಕೃಷಿ ಕೂಲಿ ಮಾಡಿಕೊಂಡು ಉಪಜೀವನ ಸಾಗಿಸಿಕೊಂಡು ಬಂದಿದ್ದು, ಈ ಪ್ರತಿವಾದಿಗೆ ಸದರಿ ದಾವಾ ಜಮೀನು ಹೊರತುಪಡಿಸಿ ಬೇರಾವುದೇ ಆಸ್ತಿ ಇರುವದಿಲ್ಲ. ಸದರಿ ದಾವಾ ಜಮೀನು ಮರಡಿ ಜಮೀನು ಇದ್ದು ಸರಿಯಾಗಿ ಬೆಳೆಗಳು ಬೆಳೆಯುವದಿಲ್ಲ ಆದ್ದರಿಂದ ಈ ಪ್ರತಿವಾದಿಯು ಬೇರೆಯವರ ಹೊಲದಲ್ಲಿ ಕೂಲಿ ಮಾಡಿಕೊಂಡು ಎಲ್ಲ ಮಕ್ಕಳನ್ನು ಬೆಳೆಸಿ ಅವರ ಮದುವೆ ಮಾಡಿದ್ದು ಇರುತ್ತದೆ. ಈ ಪ್ರತಿವಾದಿಗೆ ವಾದಿಯನ್ನು ಹೊರತುಪಡಿಸಿ ಇನ್ನೂ 2 ಜನ ಹೆಣ್ಣುಮಕ್ಕಳಿದ್ದು ಅವರೆಲ್ಲರ ಮದುವೆ ಮಾಡಲು ಸಾಕಷ್ಟು ಸಾಲ ಮಾಡಿಕೊಂಡಿದ್ದು ಇರುತ್ತದೆ. ಅಲ್ಲದೆ ವಾದಿಯ ಮದುವೆಯ ಕಾಲಕ್ಕೆ ಸಾಕಷ್ಟು ಸಾಲ ಮಾಡಿ ಅವಳಿಗೆ ಸಾಕಷ್ಟು ಹಣ ಮತ್ತು ಬಂಗಾರ ಕೊಟ್ಟು ಮದುವೆ ಮಾಡಿದ್ದು. ಈಗಲೂ ಕೂಡಾ ಇನ್ನೂ ಸಾಕಷ್ಟು ಸಾಲ ಕೊಡುವದು ಬಾಕಿ ಇದೆ. 1 ನೇ ಪ್ರತಿವಾದಿಯು ಇವನು ಕುಡಿತದ ಚಟಕ್ಕೆ ಅಂಟಿಕೊಂಡು ಊರಲ್ಲಿ ಎಲ್ಲ ಜನರ ಕಡೆಗೆ ಸಾಲ ತೆಗೆದುಕೊಂಡಿದ್ದು ಸದರಿ ಸಾಲದ ಹಣವನ್ನು 1 ನೇ ಪ್ರತಿವಾದಿಯು ಮರುಪಾವತಿಸಿದ್ದು, ದಾವಾ ಜಮೀನಿನ ಮೇಲೆಯೂ ಸಹ ಸಾಕಷ್ಟು ಸಾಲವಿರುತ್ತದೆ. 2 ನೇ ಪ್ರತಿವಾದಿಯು ಅನಾರೋಗ್ಯದಿಂದ ಬಳಲುತ್ತಿದ್ದು, ಅವರ ಔಷಧೋಪಚಾರಕ್ಕಾಗಿ ದಿನನಿತ್ಯ ಸಾಕಷ್ಟು ಖರ್ಚು ಇರುತ್ತದೆ. ಅದರಂತೆ 1 ನೇ ಪ್ರತಿವಾದಿಯು ಕೂಡಾ ಮುಪ್ಪಾವಸ್ಥೆಯಲ್ಲಿರುವದರಿಂದ ಅನಾರೋಗ್ಯದ ಕಾರಣ ದುಡಿಯುವದು ಆಗುವದಿಲ್ಲ. ವಾದಿಗೆ ಯೋಗ್ಯ ರೀತಿಯಲ್ಲಿ ಹಣ ಬಂಗಾರ ಕೊಟ್ಟು ಸಾಕಷ್ಟು ಹಣ ಖರ್ಚು ಮಾಡಿ ಮದುವೆ ಮಾಡಿ ಕೊಟ್ಟಿದ್ದು, ಈಗ ಅವಳಿಗೆ ಆಸ್ತಿಯಲ್ಲಿ ಯಾವುದೇ ರೀತಿಯ ಪಾಲು ಬರುವದು ಏನೂ ಇರುವದಿಲ್ಲ. ವಾದಿಯ ಗಂಡನು ಸಾಕಷ್ಟು ಸ್ಥಿತಿವಂತರು ಇದ್ದು ಅವಳಿಗೆ ಯಾವುದೇ ರೀತಿಯಿಂದ ತವರುಮನೆಯ ಆಸ್ತಿಯ ಅವಶ್ಯಕತೆ ಇರುವದಿಲ್ಲ. ಅಲ್ಲದೆ 3 ಹಾಗೂ 4 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಗಂಡು ಮಕ್ಕಳು ಇದ್ದು. ಈಗ ಅವರು ತಮ್ಮ ಹೆಂಡತಿ ಮಕ್ಕಳೊಂದಿಗೆ ಬೇರೆ ಬೇರೆಯಾಗಿ ವಾಸವಾಗಿರುತ್ತಾರೆ. ಸದರಿಯವರು 1 ಮತ್ತು 2 ನೇ ಪ್ರತಿವಾದಿಯರ

ಸಂರಕ್ಷಣೆ ಮಾಡುತ್ತಿಲ್ಲ. ಹಾಗಾಗಿ ಮೇಲಿನ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವಂತಹ ದಾವೆಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. 3 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ.

➢ **3** ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ವಾದಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ವಾದಿ ಹಾಗೂ ಪ್ರತಿವಾದಿಯರ ಸಂಬಂಧವನ್ನು ಹಾಗೂ ದಾವಾ ಆ ಸ್ತಿಯು **1** ನೇ ಪ್ರತಿವಾದಿಯ ತಾಯಿಯ ಕಡೆಯಿಂದ ಬಂದಿರುತ್ತದೆ ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ. ಮಸೂತಿ ಗ್ರಾಮದ ಸರ್ವೆ ನಂಃ **562/1** ಕ್ಷೇತ್ರ **21** ಎಕರೆ **19** ಗುಂಟೆ ಇದ್ದು, ಸದರಿ ಜಮೀನನ್ನು ಬಸವ್ವಳು ತನ್ನ ಜೀವಿತಾವಧಿಯಲ್ಲಿ ತನ್ನ ತವರು ಮನೆಯವರ ಕಡೆಯಿಂದ ಹಕ್ಕು ಬಿಡಿಸಿಕೊಂಡಿದ್ದು, ಸದರಿ ಆಸ್ತಿಯನ್ನು ಬಿಡಿಸಿಕೊಳ್ಳುವಾಗ ಸಾಲಹಳ್ಳಿ ಮನೆತನದ ಹೆಣ್ಣು ಮಗಳನ್ನು **1** ನೇ ಪ್ರತಿವಾದಿಯು ತನ್ನ ಗಂಡು ಮಕ್ಕಳಿಗೆ ಮದುವೆ ಮಾಡಿಕೊಳ್ಳಬೇಕು. ಸದರಿ ಆಸ್ತಿಯಲ್ಲಿ ಅರ್ಧ ಆಸ್ತಿಯನ್ನು ಸಾಲಹಳ್ಳಿರವರ ಮನೆತನದ ಹೆಣ್ಣು ಮಗಳನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ ಅವರಿಗೆ ಮುಟ್ಟಬೇಕು ಮತ್ತು **3** ನೇ ಪ್ರತಿವಾದಿಯು ಸಾಲಹಳ್ಳಿರವರ ಮನೆತನದ ಮಗಳಾದ ಸೀತವ್ವಳನ್ನು ಮದುವೆ ಮಾಡಿಕೊಂಡಿರುವುದರಿಂದ **3** ನೇ ಪ್ರತಿವಾದಿಯು ಮದುವೆಯಾದ ನಂತರ ಸಾಲಹಳ್ಳಿರವರ ಮನೆತನದಿಂದ ಬಂದ ಜಮೀನನ್ನು ಉಪಭೋಗ ಮಾಡುತ್ತಾ ಬಂದಿರುತ್ತಾನೆ ಮಸೂತಿ ಗ್ರಾಮದ ಸರ್ವೆ ನಂಃ **588/2** ಕ್ಷೇತ್ರ **4** ಎಕರೆ **16** ಗುಂಟೆ ಇದ್ದು ಜಮೀನವು ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಆಸ್ತಿಯನ್ನು ತಮ್ಮ ತಂದೆಯು ವಾದಿ ಮತ್ತು **5** ಮತ್ತು **6** ನೇ ಪ್ರತಿವಾದಿಯರ ಮದುವೆಯ ಸಲುವಾಗಿ ಮಾಡಿದ ಸಾಲ ತೀರಿಸುವುದಕ್ಕಾಗಿ ಮಾರಾಟ ಮಾಡಿದ್ದು ಮತ್ತು ವಾದಿ ಹಾಗೂ **5** ಮತ್ತು **6** ನೇ ಪ್ರತಿವಾದಿಯರು ಮದುವೆ ಮಾಡುವ ಸಮಯದಲ್ಲಿ ಹಿರಿಯರು ಕೇಳಿದಷ್ಟು ಬಂಗಾರ

ವರದಕ್ಷಿಣೆ ಕೊಟ್ಟು ಮದುವೆ ಮಾಡಲಾಗಿರುತ್ತದೆ. ವಾದಿ ಹಾಗೂ **5** ಮತ್ತು **6** ನೇ ಪ್ರತಿವಾದಿಯರು ಮದುವೆ ಮಾಡಿಕೊಳ್ಳುವ ಸಮಯದಲ್ಲಿ ತಮ್ಮ ಪಾಲಿಗೆ ಬರತಕ್ಕಂತ ಆಸ್ತಿಯನ್ನು ಮಾರಾಟ ಮಾಡಿ ಉಳಿದ ಆಸ್ತಿಯಲ್ಲಿ ಪಾಲು ಕೇಳುವುದಿಲ್ಲ ಎಂದು ಹೇಳಿರುತ್ತಾರೆ. ಮಸೂತಿ ಗ್ರಾಮದ ಸರ್ವೆ ನಂ: **308** ಕ್ಷೇತ್ರ **03** ಎಕರೆ ಜಮೀನವು ತಮ್ಮ ಪಿತ್ರಾರ್ಜಿತ ಆಸ್ತಿಯಾಗಿದ್ದು, ಈ ಕುರಿತು **1** ನೇ ಪ್ರತಿವಾದಿ ಮತ್ತು ಅವರ ಸಹೋದರ ಈರಪ್ಪ ಇವರುಗಳು ಮಾನ್ಯ ಸಿವಿಲ್ ನ್ಯಾಯಾಲಯ ಬಾಗೇವಾಡಿರವರಲ್ಲಿ ಅಸಲು ದಾವೆ ಸಂಖ್ಯೆ **227/2011** ರಂತೆ ಕಲ್ಲಪ್ಪನ ಮಕ್ಕಳಾದ ರುದ್ರಪ್ಪ ಮತ್ತು ಈರಪ್ಪರವರುಗಳ ವಿರುದ್ದ ಪಾಲು ವಾಟ್ನಿ ಕೇಳಿ ದಾವೆ ಮಾಡಿದ್ದು , ಸದರಿ ದಾವೆಯು ದಿ: **21-06-2011** ರಂದು ರಾಜಿಯಾಗಿದ್ದು ಸದರಿ ರಾಜಿಯ ಪ್ರಕಾರ **1** ಎಕರೆ ಜಮೀನವು ತಮ್ಮ ತಂದೆಯ ಪಾಲಿಗೆ ಬಂದಿರುತ್ತದೆ. ಸದರಿ ಜಮೀನನ್ನು ಕೂಡಗಿ ವಿದ್ಯುತ್ ಸ್ಥಾವರದವರು ಭೂ ಸ್ವಾಧೀನಪಡಿಸಿಕೊಂಡಿದ್ದು , ಸದರಿ ಭೂಾ ಸ್ವಾಧೀನಪಡಿಸಿಕೊಂಡ ಪರಿಹಾರ ಹಣವನ್ನು ವಾದಿ ಹಾಗೂ **2, 5** ಮತ್ತು **6** ನೇ ಪ್ರತಿವಾದಿಯರು **1** ನೇ ಪ್ರತಿವಾದಿಯನ್ನು ಹೆದರಿಸಿ ಎಲ್ಲಾ ಹಣವನ್ನು ಅವರೇ ಪಡೆದುಕೊಂಡಿರುತ್ತಾರೆ.

➤ **1** ನೇ ಪ್ರತಿವಾದಿಯು ಮೃತವಾಗುವ ಪೂರ್ವದಲ್ಲಿ ಸಾಲಹಳ್ಳಿರವರ ಕುಟುಂಬದಿಂದ ಬಂದ ಮಸೂತಿ ಗ್ರಾಮದ ಜಮೀನು ಸರ್ವೆ ನಂ: **562/1** ಕ್ಷೇತ್ರ **10** ಎಕರೆ **29** ಗುಂಟೆ **,** ಪಿಕೆ **37** ಗುಂಟೆ ನಿಕ್ಕಿ ಉಳಿದ್ದು **9** ಎಕರೆ **32** ಗುಂಟೆ ಜಮೀನನ್ನು**1** ನೇ ಪ್ರತಿವಾದಿ ತನ್ನ ತಾಯಿಗೆ ಪ್ರಮಾಣ ಮಾಡಿ ಹೇಳಿದ ಪ್ರಕಾರ ತನ್ನ ಜೀವಿತಾವಧಿಯಲ್ಲಿ ಈ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆ ಮಾಡಲು ಸಾಧ್ಯವಾಗಲಿಲ್ಲ. ಆ ವರ್ಗಾವಣೆ ಮಾಡಲು ವಾದಿ ಮತ್ತು **2, 4, 5, 6** ನೇ ಪ್ರತಿವಾದಿಯರು ಅಡ್ಡಿಪಡಿಸಿರುತ್ತಾರೆ. **1** ನೇ ಪ್ರತಿವಾದಿಯು ತನ್ನ ಜೀವಿತಾವಧಿಯಲ್ಲಿ ತನ್ನ ತಾಯಿಗೆ ಕೊಟ್ಟ ವಚನ **(**ಪ್ರಮಾಣ**)** ಉಳಿಸಿಕೊಳ್ಳುವ ಸಲುವಾಗಿ ವಾದಿ ಮತ್ತು **2, 4, 5, 6** ನೇ ಪ್ರತಿವಾದಿಯರಿಗೆ ಗೊತ್ತಾಗದ ಹಾಗೇ ದಿನಾಂಕ **: 12-12-2019** ರಂದು ಸಾಕ್ಷಿದಾರರ ಸಮಕ್ಷಮ ಮೃತ್ಯು ಪತ್ರ ಮಾಡಿರುತ್ತಾನೆ. ಆ ಮೃತ್ಯು ಪತ್ರವನ್ನು ಚನ್ನಪ್ಪ ತಂ. ಶಿವಪ್ಪ ಸಾಲಹಳ್ಳಿ ಇವರ ಕೈಯಲ್ಲಿ ಕೊಟ್ಟಿದ್ದು ಇರುತ್ತದೆ. ದಿನಾಂಕ **12-12-2019** ರಂದು ಸಾಕ್ಷಿದಾರರ

ಸಮಕ್ಷಮದಲ್ಲಿ ಮೃತ್ಯು ಪತ್ರವನ್ನು ಮಾಡಿರುತ್ತಾರೆ. ಆ ಮೃತ್ಯು ಪತ್ರವನ್ನು ಚನ್ನಪ್ಪ ತಂದೆ ಶಿವಪ್ಪ ಸಾಲಹಳ್ಳಿರವರ ಕೈಯಲ್ಲಿ ಕೊಟ್ಟಿರುತ್ತಾರೆ. ಮೃತ್ಯು ಪತ್ರದ ದಾವಾ ಆಸ್ತಿಗೆ ತಾನು ಮಾಲೀಕನಾಗಿರುತ್ತೇನೆ .

➢ ಈ ಕುರಿತು 3 ನೇ ಪ್ರತಿವಾದಿಯು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಬಸವನ ಬಾಗೇವಾಡಿರವರಲ್ಲಿ ಅಸಲು ದಾವಾ ನಂಃ 357/2023 ದಾಖಲ ಮಾಡಿ ದಾವಾ ಆಸ್ತಿಯಲ್ಲಿಯ ತಮ್ಮ ಪಾಲಿನ 1/6 ಹಿಸ್ಸಾವನ್ನು ಮಾರಾಟ ಮಾಡದಂತೆ ಮತ್ತು ಸದರಿ ದಾವಾ ಆಸ್ತಿಗೆ ಮೃತ್ಯು ಪತ್ರದ ಪ್ರಕಾರ 3 ನೇ ಪ್ರತಿವಾದಿಯೇ ಮಾಲೀಕನೆಂದು ಘೋಷಿಸಿಕೊಳ್ಳುವ ಸಲುವಾಗಿ ದಾವೆಯನ್ನು ಮಾಡಿರುತ್ತಾರೆ. ಹಾಗಾಗಿ ಈ ಮೇಲಿನ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವಂತಹ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. ಮೇಲ್ಕಾಣಿಸಿದ ಪಕ್ಷಗಾರರ ವಾದ, ಪ್ರತಿವಾದ ಪತ್ರಗಳಲ್ಲಿನ ಸಂಗತಿಗಳನ್ನು ಆಧರಿಸಿ, ನನ್ನ ಪೂರ್ವಾಧಿಕಾರಿಗಳು ಈ ಕೆಳಗಿನಂತೆ ವಿವಾದಾಂಶಗಳನ್ನು ರೂಪಿಸಿರುತ್ತಾರೆ.

ವಿವಾದಾಂಶಗಳು

1. Whether the plaintiff proves that, suit schedule properties are her ancestral properties?
2. Whether the plaintiff proves that, she is entitled for 1/6th share in the suit schedule properties?
3. Whether the plaintiff is entitled for the reliefs as claimed in the plaint?
4. What order or decree?

6. ಈ ಮೇಲ್ಕಂಡ ವಿವಾದಾಂಶಗಳಿಗೆ ಪೂರಕವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ಸಾಕ್ಷಿ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿ.ಪಿ.1 ರಿಂದ ನಿ.ಪಿ.9 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯರ ಪರವಾಗಿ 3 ನೇ ಪ್ರತಿವಾದಿ ತನ್ನನ್ನು ತಾನು ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯವನ್ನು ಮಾಡಿಸಿದ್ದು, ತನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿ , ತನ್ನ ವಾದಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. 3 ನೇ ಪ್ರತಿವಾದಿಯು ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ವಿಠ್ಠಲ ತಂದೆ ಗಿರಿಯಪ್ಪ ನಿಂಗನೂರ ರವರನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ಮಾಡಿಸಿದ್ದು, ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಡಿ-1 ರಿಂದ 3 ರಂತೆ ದಾಖಲಾತಿಯನ್ನು ಸಹ ಹಾಜರುಪಡಿಸಿರುತ್ತಾರೆ.

7. ಈ ನ್ಯಾಯಾಲಯವು ದಿನಾಂಕಃ 20-10-2018 ರಂದು ಈ ದಾವೆಯನ್ನು ಡಿಕ್ರಿ ಮಾಡಿರುತ್ತದೆ. ತದನಂತರ ಪ್ರತಿವಾದಿಯರು ದಿನಾಂಕಃ 17-05-2021 ರಂದು ಈ ನ್ಯಾಯಾಲಯವು ಮಾಡಿರುವ ಡಿಕ್ರಿಯನ್ನು ಪ್ರಶ್ನಿಸಿ ಮಾನ್ಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಬಸವನ ಬಾಗೇವಾಡಿ ರವರಲ್ಲಿ ಆರ್.ಎ.ನಂಃ07/2019 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಪುರಸ್ಕೃತಗೊಂಡು ಮರು ವಿಚಾರಣೆಗೆ ಆದೇಶವಾಗಿರುತ್ತದೆ.

8. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

9. ಮೇಲ್ಕಾಣಿಸಿದ ವಿವಾದಾಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆಃ-

ವಿವಾದಾಂಶ ಸಂ ಖ್ಯೆ1 :- ಸಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 2 :- ಸಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 3 :- ಸಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 4 ಅಂತಿಮ ಆದೇಶದಂತೆ, ಕೆಳಕಂಡ ಕಾರಣಗಳಿಗಾಗಿಃ

ಕಾ ರ ಣ ಗ ಳು

**10 .** <u>ವಿವಾದಾಂಶ ಸಂಖ್ಯೆ **1** ಃ-</u> ವಾದಿಯು ತಮ್ಮ ವಾದ ಪತ್ರದಲ್ಲಿ ದಾವಾ ಅನೂಸೂಚಿ ಆಸ್ತಿಯು ತನ್ನ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ಹೇಳಿರುತ್ತಾರೆ. ಹಾಗಾಗಿ ಈ ವಿವಾದಾಂಶ ಸಂಖ್ಯೆ 1 ನ್ನು ರುಜುವಾತು ಪಡಿಸುವ ಹೊಣೆಗಾರಿಕೆಯು ವಾದಿಯ ಮೇಲಿ ಇರುತ್ತದೆ.

11. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ಮತ್ತು 103 ರಂತೆ ವಾದಿಯು ತಾನು ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಮತ್ತು ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಮತ್ತು ದಾವಾ ಆಸ್ತಿಯಲ್ಲಿ ವಿಭಾಗವಾಗಿರುವುದಿಲ್ಲ ಎಂಬುದನ್ನು ನಿರೂಪಿಸುವ ಹೊಣೆಗಾರಿಕೆ ವಾದಿಯ ಮೇಲೆ ಇರುತ್ತದೆ.

12. ವಾದಿಯು ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳ ಸಮರ್ಥನೆಗಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲೂ್ಯ.1 ಎಂದು ವಿಚಾರಣೆಗೆ ಗುರಿಪಡಿಸಿದ್ದು, ಸದರಿ ಪಿ.ಡಬ್ಲೂ್ಯ-1 ರವರು ತನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿ , ತನ್ನ ವಾದಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಪಿ.ಡಬ್ಲೂ್ಯ.1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ1 ರಿಂದ 9 ರಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

ನಿಪಿ.1 ರಂತೆ ದಾವಾ ಸ್ವತಿಗೆ ಸಂಬಂಧಪಟ್ಟ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಮಸೂತಿ ಗ್ರಾಮದ ಸರ್ವೆ ನಂಃ 562/1 ಕ್ಷೇತ್ರ 10 ಎಕರೆ 29 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂನಲ್ಲಿ ಲಕ್ಷ್ಮಣ ತಂದೆ ಬಸಪ್ಪ ಚನಗೊಂಡರವರ ಹೆಸರು ಎಂ ಆರ್ ನಂಃ 329/2005-06 ವಿಭಜನೆ ದಿಃ 15-06-2006 ರ ಮೂಲಕ ನಮೂದಾಗಿರುವುದು ಕಂಡು ಬರುತ್ತದೆ. ನಿಪಿ-2 ರಂತೆ ಹಕ್ಕು ಬದಲಾವಣೆಯ ವಹಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ ಡ ನಂಃ 5535 ಬಾಜುಕೆ ಬರೆದ ಕ.ಸ ನಂಬರದ ಮಾಲೀಕರಾದ ಬಸವ್ವ ಗಂಡ ಬಸ್ಸಪ್ಪ

ಸಾಲಹಳ್ಳಿ ಇವರು ದಿಃ 23-12-1993 ರಂದು ಮೃತರಾಗಿದ್ದು, ಮೃತರ ಪಾಶ್ಚಾತ ಮಾಲೀಕರು 1) ಕಲ್ಲಪ್ಪ 2) ಲಕ್ಷ್ಮಣ ತಂದೆ ಬಸಪ್ಪ ಚನಗೊಂಡ ಅಂತ ಇದ್ದು, ಇವರಲ್ಲಿ ಕಲ್ಲಪ್ಪ ಬಸಪ್ಪ ಚನಗೊಂಡ ಇವರು ಸಹಿತ 29-05-1998 ರಂದು ಮೃತರಾಗಿದ್ದು , ಮೃತರಿಗೆ ಗಂಡು ಮಕ್ಕಳಾದ 1)ರುದ್ರಪ್ಪ 2) ಈರಪ್ಪ ತಂದೆ ಕಲ್ಲಪ್ಪ ಚನಗೊಂಡ ಹೆಣ್ಣು ಮಕ್ಕಳು 3) ಯಲ್ಲವ್ವ ಗಂಡ ಬಾಬು ಪೋಲಿಸಿ 4) ಸುನಂದಾ ತಂದೆ ಕಲ್ಲಪ್ಪ ಚನಗೊಂಡ ಅಂತ ನೇರ ವಾರಸುದಾರರು ಇದ್ದು ತಮ್ಮೆಲ್ಲರ ಹೆಸರು ದಾಖಲ ಮಾಡಲು ಕೊಟ್ಟ ವರ್ದಿ ಪ್ರಕಾರ ದಾಖಲ ಎಂದು ನಮೂದಾಗಿರುವುದು ಕಂಡು ಬರುತ್ತದೆ. ನಿಪಿ-3 ರಂತೆ ಎಂ ಆರ್ ನಂಃ 329/2005-06 ನ್ನು ಹಾಜರುಪಡಿಸಿರುತ್ತಾರೆ. ನಿಪಿ-4 ರಂತೆ ಹಕ್ಕು ಬದಲಾವಣೆಯ ವಹಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು , ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ ಡ ನಂಃ 2172 ದಿಃ 07-08-74 ರಂದು ಬಾಜುಕೆ ಬರೆದ ಗೌರವ್ವ ಗಂಡ ನಿಂಗಪ್ಪ ಸಾಲೊಳ್ಳಿರವರು ದಿಃ 09-02-74 ರಂದು ಮೃತ ಆಗಿದ್ದು , ಮೃತರಿಗೆ ಗಂಡು ಸಂತಾನ ಇಲ್ಲ ಕೇವಲ ಒಬ್ಬಳೆ ಮಗಳಿದ್ದು ಬಸವ್ವ ಗಂಡ ಬಸಪ್ಪ ಚನಗೊಂಡ ಅಂತಾ ಇರುತ್ತಾಳೆ ಸದರಿಯವಳು ವರದಿ ಕೊಟ್ಟ ಪ್ರಕಾರ ದಾಖಲ ಮಾಡಲಾಯಿತು ಎಂದು ನಮೂದಿರುವುದು ಕಂಡು ಬರುತ್ತದೆ.

ನಿಪಿ-5 ರಿಂದ 9 ರಂತೆ ಅಸಲು ದಾವೆ ಸಂಖ್ಯೆ 227/2011 ರ ಆದೇಶ ಪುಟದ , ವಾದ ಪತ್ರದ , ಜಂಟಿ ಮೇಮೋದ , ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ 23 ನಿಯಮ 3 ರ ಕೆಳಗೆ ಸಲ್ಲಿಸಿರುವ ರಾಜಿ ಅರ್ಜಿ ಮತ್ತು ರಾಜಿ ಡಿಕ್ರಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು , ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ ಈರಪ್ಪ ಬಸಪ್ಪ ಚನಗೊಂಡ ಮತ್ತು ಲಕ್ಷ್ಮಣ ತಂದೆ ಬಸಪ್ಪ ಚನಗೊಂಡರವರುಗಳು ರುದ್ರಪ್ಪ ತಂದೆ ಕಲ್ಲಪ್ಪ ಚನಗೊಂಡ , ಈರಪ್ಪ ಕಲ್ಲಪ್ಪ ಚನಗೊಂಡ ಮತ್ತು ವಿಶೇಷ ಭೂ ಸ್ವಾಧೀನ ಅಧಿಕಾರಿಗಳು ರವರುಗಳ ವಿರುದ್ದ ಪಾಲು ವಿಭಾಗ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ದಾವೆಯನ್ನು ಮಾನ್ಯ ಸಿವಿಲ್ ನ್ಯಾಯಾಲಯ ಬಸವನ ಬಾಗೇವಾಡಿರವರಲ್ಲಿ ಸಲ್ಲಿಸಿದ್ದು ಸದರಿ ದಾವೆಯಲ್ಲಿರುವ ವಾದಿಯರು ಮತ್ತು 1 ಮತ್ತು 2 ನೇ

ಪ್ರತಿವಾದಿಯರು ರಾಜಿ ಅರ್ಜಿಯನ್ನು ಸಲ್ಲಿಸಿರುವುದು , ಸದರಿ ರಾಜಿ ಅರ್ಜಿಯ ಪ್ರಕಾರ ಸದರಿ ದಾವೆಯು ದಿ 21-06-2011 ರಂದು ರಾಜಿ ಡಿಕ್ರಿಯಾಗಿರುವುದು ಕಂಡು ಬರುತ್ತದೆ.

13. 3 ನೇ ಪ್ರತಿವಾದಿಯು ವಾದ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ನಡುವಣ ಸಂಬಂಧದ ಕುರಿತು ಹಾಗೂ ದಾವಾ ಅನುಸೂಚಿತ ಸ್ವತ್ತು ವಾದಿ ಮತ್ತು 3 ರಿದ 5 ನೇ ಪ್ರತಿವಾದಿಯರ ತಂದೆಯ ತಾಯಿ ಕಡೆಯಿಂದ ಬಂದ ಆಸ್ತಿಯಾಗಿರುತ್ತದೆ ಎಂಬುದರ ಕುರಿತು ಪ್ರತಿವಾದಿಯರು ಒಪ್ಪಿಕೊಂಡಿರುತ್ತಾರೆ. ದಾವಾ ಆಸ್ತಿಯು ತಮ್ಮ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂಬುದನ್ನು ಅಲ್ಲಗಳೆದು, ದಾವಾ ಆಸ್ತಿಯನ್ನು ತನ್ನ ತಂದೆಯು ಮೃತ್ಯುಪತ್ರದ ಮೂಲಕ ತನಗೆ ನೀಡಿರುತ್ತಾರೆ. ಹಾಗಾಗಿ ದಾವಾ ಆಸ್ತಿಯು ತನ್ನ ಸ್ವಯಾರ್ಜಿತ ಆಸ್ತಿ ಎಂದು ತಮ್ಮ ಪ್ರತಿವಾದ ಪತ್ರದಲ್ಲಿ ಆಧರಿಸಿರುತ್ತಾರೆ.

14. 3 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಸಂಗತಿಗಳ ಸಮರ್ಥನೆಗಾಗಿ ತನ್ನನ್ನು ತಾನು ಡಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಡಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಸದರಿ 3 ನೇ ಪ್ರತಿವಾದಿಯು ತನ್ನ ಸಾಕ್ಷ್ಯಕ್ಕೆ ಪೂರಕವಾಗಿ ವಿಠ್ಠಲ ತಂದೆ ಗಿರಿಯಪ್ಪ ನಿಂಗನೂರ ಎಂಬುವವರನ್ನು ಡಿ. ಡಬ್ಲ್ಯೂ-2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ, ಸದರಿ 3 ನೇ ಪ್ರತಿವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಡಿ-1 ರಿಂದ 3 ರಂತೆ ದಾಖಲಾತಿಗಳನ್ನು ಹಾಜರುಪಡಿಸಿ ರುತ್ತಾರೆ .

ನಿಡಿ-1 ಮತ್ತು 2 ರಂತೆ ಅಸಲು ದಾವೆ ಸಂಖ್ಯೆ 357/2023 ರಲ್ಲಿಯ ವಾದ ಪತ್ರ ಮತ್ತು ಪ್ರತಿವಾದ ಪತ್ರದ ದೃಡಿಕೃತ ನಕಲುಗಳನ್ನು ಹಾಜರುಪಡಿಸಿದ್ದು , ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ದಾವೆಯಲ್ಲಿರುವ 3 ನೇ ಪ್ರತಿವಾದಿಯಾದ

ದುಂಡಪ್ಪ ತಂದೆ ಲಕ್ಷ್ಮಣ ಚನಗೊಂಡರವರು ಗಂಗಾಬಾಯಿ ಗಂಡ ಲಕ್ಷ್ಮಣ ಚನಗೊಂಡ , ಗೌರಾಬಾಯಿ ಗಂಡ ಮಲ್ಲಿಕಾರ್ಜುನಗೂಳೆದಾರ , ರಾಮಣ್ಣಾ ತಂದೆ ಲಕ್ಷ್ಮಣ ಚನಗೊಂಡ , ಮಲ್ಲಕ್ಕ ಗಂಡ ಚಂದ್ರಶೇಖರ ಮಿಣಜಗಿ ಹಾಗೂ ದೇವಕಿ ಗಂಡ ಸಂಗನಗೌಡ ಬಗಲಿ ರವರುಗಳ ವಿರುದ್ದ ದಾವಾ ಆಸ್ತಿಯ ಕುರಿತು ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರಗಳನ್ನು ಕೋರಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಬಸವನ ಬಾಗೇವಾಡಿರವರಲ್ಲಿ ಸಲ್ಲಿಸಿರುವುದು ಮತ್ತು ಸದರಿ ದಾವೆಯಲ್ಲಿ ಈ ಪ್ರಕರಣದಲ್ಲಿರುವ ವಾದಿಯಾದ ದೇವಕಿ ಗಂಡ ಸಂಗನಗೌಡ ಬಗಲಿರವರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ನಿಡಿ-3 ರಂತೆ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಮಸೂತಿ ಗ್ರಾಮದ ಸರ್ವೆ ನಂಃ 588/2 ಕ್ಷೇತ್ರ 4 ಎಕರೆ 16 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂನಲ್ಲಿ ಭೀಮಪ್ಪ ತಂದೆ ಗಿರಿಯಪ್ಪ ನಿಂಗಾನೂರು ಮತ್ತು ಇತರರ ಹೆಸರು ಜಂಟಿಯಾಗಿ ನಮೂದಾಗಿರುವುದು ಕಂಡು ಬರುತ್ತದೆ.

15. ಮಾನ್ಯ ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ವಾದಿ ಮತ್ತು ಪ್ರತಿವಾದಿಗಳು ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತಾರೆ ಎಂಬ ಸಂಗತಿಯನ್ನು ಪ್ರತಿವಾದಿಗಳು ಒಪ್ಪಿರುತ್ತಾರೆ. ವಾದಿ ಮತ್ತು 1 ರಿಂದ 6 ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆ ಮತ್ತು ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಇಲ್ಲಿಯವರೆಗೂ ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳ ಮದ್ಯೆ ವಿಭಾಗವಾಗಿರುವುದಿಲ್ಲ. ವಾದಿಯು 1 ರಿಂದ 4 ನೇ ಪ್ರತಿವಾದಿಗಳಿಗೆ ತನ್ನ ಭಾಗವನ್ನು ಕೊಡುವಂತೆ ಕೇಳಿದಾಗ ನಿರಾಕರಿಸಿರುತ್ತಾರೆ. ಆದ್ದರಿಂದ ವಾದಿಯ ದಾವಾ ಆಸ್ತಿಯಲ್ಲಿ 1/6 ಭಾಗಕ್ಕೆ ಹಕ್ಕುಳ್ಳವನಾಗಿರುತ್ತಾರೆ.

ಆದ್ದರಿಂದ ವಾದಿಯು ಸಲ್ಲಿಸಿರುವ ದಾವೆಯನ್ನು ಡಿಕ್ರಿಗೊಳಿಸಬೇಕೆಂದು ವಾದ ಮಂಡಿಸಿರುತ್ತಾರೆ.

16. 3 ನೇ ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿ ಮತ್ತು ಪ್ರತಿವಾದಿಗಳ ಸಂಬಂಧವನ್ನು ಒಪ್ಪಿರುತ್ತಾರೆ. ಆದರೆ ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂಬುದನ್ನು ಅಲ್ಲಗಳೆದಿರುತ್ತಾರೆ. ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಯು ಸಾಲಹಳ್ಳಿರವರ ಮನೆತನದ ಮಗಳನ್ನು ಮದುವೆ ಮಾಡಿಕೊಂಡಿರುವುದರಿಂದ ಸಾಲಹಳ್ಳಿ ಮನೆತನದಿಂದ ಬಂದ ಜಮೀನವು ತನ್ನ ಕಬ್ಜಾ ವಹಿವಾಟಿಯಲ್ಲಿಟ್ಟುಕೊಂಡು ಯಾರದೇ ಅಡ್ಡಿ ಆತಂಕ ಇಲ್ಲದೇ ವಹಿವಾಟು ಉಪಭೋಗ ಮಾಡುತ್ತಾ ಬಂದಿರುತ್ತೇನೆ . ಸದರಿ ಜಮೀನು ಮಡ್ಡಿ ಜಮೀನಾಗಿದ್ದು ನಂತರ 3 ನೇ ಪ್ರತಿವಾದಿಯು ತನ್ನ ವೈಯಕ್ತಿಕ ಖರ್ಚಿನಿಂದ ಜಮೀನನ್ನು ಅಭಿವೃದ್ಧಿ ಮಾಡಿ ನೀರಾವರಿ ಜಮೀನಾಗಿ ಪರಿವರ್ತನೆ ಮಾಡಿರುತ್ತಾನೆ. 1 ನೇ ಪ್ರತಿವಾದಿಯು ತನ್ನ ಜೀವಿತಾವಧಿಯಲ್ಲಿ ತನ್ನ ತಾಯಿಗೆ ಕೊಟ್ಟ ವಚನ ಉಳಿಸಿಕೊಳ್ಳುವ ಉದ್ದೇಶದಿಂದ ವಾದಿ ಮತ್ತು 2 ರಿಂದ 6 ನೇ ಪ್ರತಿವಾದಿಯರಿಗೆ ಗೊತ್ತಾಗದ ಹಾಗೆ ದಿಃ 12.12.2019 ರಂದು ಸಾಕ್ಷಿದಾರರ ಸಮಕ್ಷಮ ಮೃತ್ಯುಪತ್ರ ಮಾಡಿರುತ್ತಾನೆ. ಹಾಗಾಗಿ ಸದರಿ ಆಸ್ತಿಯು 3 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ವಾದಿ ಮತ್ತು ಇತರ ಪ್ರತಿವಾದಿಗಳು ಭೂ ಸ್ವಾಧೀನಪಡಿಸಿಕೊಂಡ ಪರಿಹಾರದ ಹಣವನ್ನು ತೆಗೆದುಕೊಂಡಿರುತ್ತಾರೆ. ಆದ್ದರಿಂದ ವಾದಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ. ಆದ್ದರಿಂದ ವಾದಿಯು ಸಲ್ಲಿಸಿದ ದಾವೆಯನ್ನು ಖರ್ಚಿನೊಂದಿಗೆ ವಜಾ ಮಾಡಬೇಕೆಂದು ಕೋರಿರುತ್ತಾರೆ.

17. ಈ ಮೇಲಿನ ಉಭಯ ಪಕ್ಷಗಾರರ ವಾದ - ಪ್ರತಿವಾದವನ್ನು, ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳು ಮತ್ತು ಪಕ್ಷಗಾರರ ಪರ ವಕೀಲರು ಮಂಡಿಸಿದ ವಾದಗಳನ್ನು, ನ್ಯಾಯಾಲಯವು ಕೂಲಂಕಷವಾಗಿ ಪರಿಶೀಲಿಸಲಾಯಿತು. ಪ್ರತಿವಾದಿಗಳು ತಮ್ಮ ಮತ್ತು ವಾದಿಯ ಸಂಬಂಧ ಕುರಿತು ಮತ್ತು ದಾವಾ ಆಸ್ತಿಯು 1 ನೇ ಪ್ರತಿವಾದಿಯ ತಾಯಿಯಾದ ಬಸವ್ವಳಿಗೆ ಸೇರಿರುತ್ತದೆ ಎಂಬುದರ ಕುರಿತು ಒಪ್ಪಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ವಾದಿ ಮತ್ತು 2 ರಿಂದ 6 ಪ್ರತಿವಾದಿಯರು ಜಂಟಿ ಕುಟುಂಬದ ಸದಸ್ಯರು ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ವಾದಿಯು ತಮ್ಮ ವಾದಪತ್ರದಲ್ಲಿ ನಮೂದಿಸಿರುವಂತೆ ವಾದಿ ಮತ್ತು 2 ರಿಂದ 6 ಪ್ರತಿವಾದಿಗಳ ಕುಟುಂಬದ ವಂಶವೃಕ್ಷವು ಸ್ಪಷ್ಟತೆಯಿಂದ ಕೂಡಿರುತ್ತದೆ ಎಂದು ನ್ಯಾಯಾಲಯ ತೀರ್ಮಾನಕ್ಕೆ ಬರುತ್ತದೆ.

18. ದಾವಾ ಅನುಸೂಚಿತ ಸ್ವತ್ತು ಪಿತ್ರಾರ್ಜಿತ ಒಟ್ಟು ಕುಟುಂಬದ ಸ್ವತ್ತು ಎಂದು ವಾದಿಯು ವಾದಪತ್ರದಲ್ಲಿ ಉಲ್ಲೇಖಿಸಿರುತ್ತಾರೆ. ಈ ಕುರಿತಾಗಿ ವಾದಿಯು ನಿಶಾನೆ ಪಿ.1 ರಂತೆ ದಾವಾ ಸ್ವತ್ತಿಗೆ ಸಂಬಂಧಪಟ್ಟ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಮಸೂತಿ ಗ್ರಾಮದ ಸರ್ವೆ ನಂಃ 562/1 ಕ್ಷೇತ್ರ 10 ಎಕರೆ 29 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂನಲ್ಲಿ ಲಕ್ಷ್ಮಣ ತಂದೆ ಬಸಪ್ಪ ಚನಗೊಂಡರವರ ಹೆಸರಿನಲ್ಲಿ ನಮೂದು ಇರುವುದು ಕಂಡು ಬರುತ್ತದೆ. ನಿಪಿ-2 ರಂತೆ ಒಂದು ಹಕ್ಕು ಬದಲಾವಣೆ ವಹಿಯನ್ನು ಹಾಜರುಪಡಿಸಿದ್ದು , ಡ ನಂಃ 5535 ಬಾಜುಕೆ ಬರೆದ ಕ.ಸ ನಂಬರದ ಮಾಲೀಕರಾದ ಬಸವ್ವ ಗಂಡ ಬಸ್ಸಪ್ಪ ಸಾಲಹಳ್ಳಿ ಇವರು ದಿಃ 23-12-1993 ರಂದು ಮೃತರಾಗಿದ್ದು, ಮೈತರ ಪಾಶ್ಚಾತ ಮಾಲೀಕರು 1) ಕಲ್ಲಪ್ಪ 2) ಲಕ್ಷ್ಮಣ ತಂದೆ ಬಸಪ್ಪ ಚನಗೊಂಡ ಅಂತ ಇದ್ದು, ಇವರಲ್ಲಿ ಕಲ್ಲಪ್ಪ ಬಸಪ್ಪ ಚನಗೊಂಡ ಇವರು ಸಹಿತ 29-05-1998 ರಂದು ಮೈತರಾಗಿದ್ದು , ಮೈತರಿಗೆ ಗಂಡು ಮಕ್ಕಳಾದ 1)ರುದ್ರಪ್ಪ 2) ಈರಪ್ಪ ತಂದೆ ಕಲ್ಲಪ್ಪ ಚನಗೊಂಡ ಹೆಣ್ಣು ಮಕ್ಕಳು 3) ಯಲ್ಲವ್ವ ಗಂಡ ಬಾಬು ಪೋಲಿಸಿ 4) ಸುನಂದಾ ತಂದೆ ಕಲ್ಲಪ್ಪ ಚನಗೊಂಡ ಅಂತ ನೇರ ವಾರಸುದಾರರು ಇದ್ದು ತಮ್ಮೆಲ್ಲರ

ಹೆಸರು ದಾಖಲ ಮಾಡಲು ಕೊಟ್ಟ ವರ್ದಿ ಪ್ರಕಾರ ದಾಖಲ ಎಂದು ನಮೂದಾಗಿರುವುದು ಕಂಡು ಬರುತ್ತದೆ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

19. ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಅಜ್ಜನ ಹೆಸರು ಬಸಪ್ಪ ಇರುತ್ತದೆ. ತನ್ನ ಅಜ್ಜನಿಗೆ ಈರಪ್ಪ, ಲಕ್ಷ್ಮಣ ಮತ್ತು ಕಲ್ಲಪ್ಪ ಮೂರು ಮಕ್ಕಳು ಇರುತ್ತಾರೆ. ತಮ್ಮ ಅಜ್ಜನಿಂದ ತಮಗೆ ಎಷ್ಟು ಆಸ್ತಿಗಳು ಬಂದಿರುತ್ತದೆ ಎಂಬುದು ತನಗೆ ಗೊತ್ತಿಲ್ಲ. ತನ್ನ ಅಜ್ಜಿ ಬಸವ್ವಳಿಗೆ ಎಷ್ಟು ಆಸ್ತಿಗಳು ಇದ್ದವು ಎಂಬುದು ತನಗೆ ಗೊತ್ತಿಲ್ಲ. ತನ್ನ ಅಜ್ಜಿಯು ಸಾಲಹಳ್ಳಿರವರ ಮನೆತನದವರು ಇರುತ್ತಾರೆ ಎಂದರೆ ಸರಿ. ತನ್ನ ಅಜ್ಜಿ ಬಸವ್ವಳಿಗೆ ಯಾವುದೇ ಅಣ್ಣ ತಮ್ಮಂದಿರು ಇರಲಿಲ್ಲ ಎಂದರೆ ಸರಿ. ತನ್ನ ಅಜ್ಜಿ ಬಸವ್ವಳಿಗೆ ಒಟ್ಟು 21 ಎಕರೆ ಜಮೀನು ಒಂದೇ ಕಡೆ ಇತ್ತು ಎಂದರೆ ಸರಿ. ತನ್ನ ಅಜ್ಜಿ ಬಸವ್ವಳಿಗೆ ಮತ್ತೊಂದು ಕಡೆ 06 ಎಕರೆ ಜಮೀನು ಇತ್ತು ಎಂದರೆ ಸರಿ. ಸದರಿ 21 ಎಕರೆ ಜಮೀನನ್ನು ತನ್ನ ತಂದೆ ಮತ್ತು ತನ್ನ ಚಿಕ್ಕಪ್ಪ ಕಲ್ಲಪ್ಪರವರು ಅರ್ಧ ಅರ್ಧ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ತನ್ನ ಅಜ್ಜಿಯು ತನ್ನ ತಂದೆಗೆ ಅವರ ತವರು ಮನೆಯ ಕನ್ಯೆಯನ್ನು ತೆಗೆದುಕೊಂಡು 3 ನೇ ಪ್ರತಿವಾದಿಗೆ ಮದುವೆ ಮಾಡಿಕೊಳ್ಳುವಂತೆ ಹೇಳಿದ್ದಳು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಸಾಲಹಳ್ಳಿರವರ ಮನೆತನದ ಹೆಣ್ಣು ಮಗಳಾದ ಸೀತವ್ವಳನ್ನು ಮದುವೆ ಮಾಡಲಾಗಿರುತ್ತದೆ ಎಂದರೆ ಸರಿ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ,

20. ಡಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ವಾದಿಯು ಈ ದಾವೆಯಲ್ಲಿ ದಾವಾ ಆಸ್ತಿ ಸರ್ವೆ ನಂಃ 562/1 ಕ್ಷೇತ 10 ಎಕರೆ 29 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ವಾದಿಯು ದಾವಾ ಆಸ್ತಿಯಲ್ಲಿ ಭಾಗವನ್ನು ಕೋರಿ ಸಲ್ಲಿಸಿರುತ್ತಾರೆ. ದಾವಾ ಆಸ್ತಿಯ ಪಹಣಿ ಪತ್ರಿಕೆಗಳಲ್ಲಿ ತನ್ನ, ವಾದಿ ಮತ್ತು ಇತರೆ ಪ್ರತಿವಾದಿಗಳ ಹೆಸರು ನಮೂದಾಗಿರುತ್ತದೆ. ತಮ್ಮ ಹೆಸರಿಗೆ ದಾವಾ ಆಸ್ತಿಯ ಪಹಣಿ

ಪತ್ರಿಕೆಯು ಆಗುವ ಪೂರ್ವದಲ್ಲಿ ತಮ್ಮ ತಂದೆಯ ಹೆಸರಿನಲ್ಲಿ ಪಹಣಿ ಪತ್ರಿಕೆಯು ಇತ್ತು ಎಂದರೆ ಸರಿ. ದಾವಾ ಆಸ್ತಿಯು ತಮ್ಮ ತಂದೆಗಿಂತ ಮೊದಲು ತಮ್ಮ ಅಜ್ಜಿಯಾದ ಬಸವ್ವ ಗಂಡ ಬಸಪ್ಪ ಚನಗೊಂಡರವರ ಹೆಸರಿನಲ್ಲಿ ಇತ್ತು. ಬಸವ್ವ ಗಂಡ ಬಸಪ್ಪ ಚನಗೊಂಡವರ ಹೆಸರಿನಲ್ಲಿ ದಾವಾ ಆಸ್ತಿಯು ಸರ್ವೇ ನಂ.562 ಒಟ್ಟು ಕ್ಷೇತ್ರ 21 ಎಕರೆ ಇತ್ತು. ತಮ್ಮ ಅಜ್ಜಿಯು ಮೃತ ಪಟ್ಟು ಸುಮಾರು 20 ವರ್ಷಗಳು ಆಗಿರಬಹುದು. ತನ್ನ ಅಜ್ಜಿಯು ಮೃತ ಪಟ್ಟ ನಂತರ ಸರ್ವೇ ನಂ. 562 ರ ಆಸ್ತಿಯು ತನ್ನ ತಂದೆ ಮತ್ತು ತನ್ನ ದೊಡ್ಡಪ್ಪನಾದ ಕಲ್ಲಪ್ಪನ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ತನ್ನ ದೊಡ್ಡಪ್ಪನು ಮೃತ ಪಟ್ಟ ನಂತರ ಅವನ ಮಕ್ಕಳ ಹೆಸರಿಗೆ ದಾವಾ ಆಸ್ತಿಯು ಬದಲಾವಣೆ ಆಗಿರುತ್ತದೆ ಎಂದರೆ ಸರಿ. ತನ್ನ ಅಜ್ಜಿ ಬಸವ್ವನ ತಂದೆಯ ಹೆಸರು ನಿಂಗಪ್ಪ ಇರುತ್ತದೆ. ಬಸವ್ವನ ತಾಯಿಯ ಹೆಸರು ಗೌರವ್ವ ಇರುತ್ತದೆ. ನಿಂಗಪ್ಪನು ಗೌರವ್ವನಕ್ಕಿಂತ ಮೊದಲು ಮೃತ ಪಟ್ಟಿದ್ದನು ಎಂದರೆ ಸರಿ. ನಿಂಗಪ್ಪನು ಮೃತ ಪಟ್ಟ ನಂತರ ಅವನ ಹೆಂಡತಿಯಾದ ಗೌರವ್ವನ ಹೆಸರಿಗೆ ದಾವಾ ಆಸ್ತಿಯು ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ತನ್ನ ಅಜ್ಜಿಯ ಹೆಸರಿಗೆ ಮಾತ್ರ ಗೊತ್ತು ಎಂದು ಹೇಳುತ್ತಾರೆ. ಗೌರವ್ವನು ಮೃತ ಪಟ್ಟ ನಂತರ ದಾವಾ ಆಸ್ತಿಯು ಅವರ ಒಬ್ಬಳೇ ಮಗಳಾದ ಬಸವ್ವನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ತನ್ನ ತಂದೆ ಮತ್ತು ತನ್ನ ದೊಡ್ಡಪ್ಪಸೇರಿ ಇದೇ ನ್ಯಾಯಾಲಯದಲ್ಲಿ ಈರಪ್ಪನ ಮಕ್ಕಳಗಳ ವಿರುದ್ದ ಅಸಲು ದಾವೆ ನಂ.227/2011 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಸಲು ದಾವೆ ನಂ.227/2011 ರ ದಾವೆಯಲ್ಲಿ ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಇಬ್ಬರೂ ಹಣವನ್ನು ಹಂಚಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-8 ರ ರಾಜೀ ಅರ್ಜಿಯ ಪ್ಯಾರಾ ನಂ.4 ರಲ್ಲಿ ಬರೆದಿರುವ ಅಂಶಗಳು ಸರಿ ಇರುತ್ತದೆ ಎಂದರೆ ಸರಿ. ನಿಪಿ-8 ರ ರಾಜೀ ಅರ್ಜಿಯ ಪ್ಯಾರಾ ನಂ.4 ರಲ್ಲಿ ಸರ್ವೇ ನಂ.562 ರ ಆಸ್ತಿಯು ಲಕ್ಷ್ಮಣ, ಈರಪ್ಪ ಮತ್ತು ರುದ್ರಪ್ಪರವರಿಗೆ ಮಾತ್ರ ಹೋಗಬೇಕೆಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ತನ್ನ

ತಂದೆಗೆ ಅರ್ಧ ಭಾಗ ಮತ್ತು ತಮ್ಮ ದೊಡ್ಡಪ್ಪನಿಗೆ ಅರ್ಧ ಭಾಗ ಹೋಗಬೇಕೆಂದು ಹೇಳುತ್ತಾರೆ ಎಂದು ನುಡಿದಿರುವುದು ಕಂಡು ಬರುತ್ತದೆ.

21. ಈ ಮೇಲಿನ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ದಾವಾ ಆಸ್ತಿ ಸರ್ವೆ ನಂಃ 562 ರ ಆಸ್ತಿಯು ಮೂಲತಃ 1 ನೇ ಪ್ರತಿವಾದಿಯ ತಾಯಿಯಾದ ಬಸವ್ವಳಿಗೆ ಸೇರಿದ್ದು, ಸದರಿ ಬಸವ್ವರವರ ಮರಣಾ ನಂತರ ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಸಹೋದರರ ನಡುವೆ ವಿಭಾಗವಾಗಿ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವುದು ಮತ್ತು ಸದರಿ 1 ನೇ ಪ್ರತಿವಾದಿಯ ಮರಣಾ ನಂತರ ದಾವಾ ಆಸ್ತಿಯು ವಾದಿ ಮತ್ತು 2 ರಿಂದ 6 ನೇ ಪ್ರತಿವಾದಿಯರಿಗೆ ಬಂದಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಆಸ್ತಿಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

**22.** **3** ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಮಸೂತಿ ಗ್ರಾಮದ ಸರ್ವೆ ನಂಃ **562/1** ಕ್ಷೇತ್ರ **21** ಎಕರೆ **19** ಗುಂಟೆ ಇದ್ದು**,** ಸದರಿ ಜಮೀನನ್ನು ಬಸವ್ವಳು ತನ್ನ ಜೀವಿತಾವಧಿಯಲ್ಲಿ ತನ್ನ ತವರು ಮನೆಯವರ ಕಡೆಯಿಂದ ಹಕ್ಕು ಬಿಡಿಸಿಕೊಂಡಿದ್ದು ಸದರಿ ಆಸ್ತಿಯನ್ನು ಬಿಡಿಸಿಕೊಳ್ಳುವಾಗ ಸಾಲಹಳ್ಳಿ ಮನೆತನದ ಹೆಣ್ಣು ಮಗಳನ್ನು **1** ನೇ ಪ್ರತಿವಾದಿಯು ತನ್ನ ಗಂಡು ಮಕ್ಕಳಿಗೆ ಮದುವೆ ಮಾಡಿಕೊಳ್ಳಬೇಕು**.** ಸದರಿ ಆಸ್ತಿಯಲ್ಲಿ ಅರ್ಧ ಆಸ್ತಿಯನ್ನು ಸಾಲಹಳ್ಳಿರವರ ಮನೆತನದ ಹೆಣ್ಣು ಮಗಳನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ ಅವರಿಗೆ ಮುಟ್ಟಬೇಕು ಮತ್ತು **3** ನೇ ಪ್ರತಿವಾದಿಯು ಸಾಲಹಳ್ಳಿರವರ ಮನೆತನದ ಮಗಳಾದ ಸೀತವ್ವಳನ್ನು ಮದುವೆ ಮಾಡಿಕೊಂಡಿರುವುದರಿಂದ **3** ನೇ ಪ್ರತಿವಾದಿಯು ಮದುವೆಯಾದ ನಂತರ ಸಾಲಹಳ್ಳಿರವರ ಮನೆತನದಿಂದ ಬಂದ ಜಮೀನನ್ನು ಉಪಬೋಗ ಮಾಡುತ್ತಾ ಬಂದಿರುತ್ತೇನೆ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು 3 ನೇ ಪ್ರತಿವಾದಿಯ ಪ್ರತಿವಾದವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು 3 ನೇ

ಪ್ರತಿವಾದಿಯು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ . ಈ ಕುರಿತು 3 ನೇ ಪ್ರತಿವಾದಿ ಪರ ವಕೀಲರು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ಪ್ರಶ್ನೆಗಳನ್ನು ಕೇಳಿರುತ್ತಾರೆ. ಈ ಕುರಿತು ಪಿ. ಡಬ್ಲ್ಯೂ-1 ರವರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

23. ಪಿ.ಡಬ್ಲ್ಯೂ1 ರವರು ತಮ್ಮ ಪಾಟೀ ಸವಾಲಿನಲ್ಲಿ ಸದರಿ 21 ಎಕರೆ ಜಮೀನನ್ನು ತನ್ನ ತಂದೆ ಮತ್ತು ತನ್ನ ಚಿಕ್ಕಪ್ಪ ಕಲ್ಲಪ್ಪರವರು ಅರ್ಧ ಅರ್ಧ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ತನ್ನ ಅಜ್ಜಿಯು ತನ್ನ ತಂದೆಗೆ ಅವರ ತವರು ಮನೆಯ ಕನ್ಯೆಯನ್ನು ತೆಗೆದುಕೊಂಡು 3 ನೇ ಪ್ರತಿವಾದಿಗೆ ಮದುವೆ ಮಾಡಿಕೊಳ್ಳುವಂತೆ ಹೇಳಿದ್ದಳು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಸಾಲಹಳ್ಳಿರವರ ಮನೆತನದ ಹೆಣ್ಣು ಮಗಳಾದ ಸೀತವ್ವಳನ್ನು ಮದುವೆ ಮಾಡಲಾಗಿರುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

24. ಈ ಮೇಲಿನ ಪಿ.ಡಬ್ಲ್ಯೂ-1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ 21 ಎಕರೆ ಜಮೀನನ್ನು ತನ್ನ ತಂದೆ ಮತ್ತು ತನ್ನ ಚಿಕ್ಕಪ್ಪ ಕಲ್ಲಪ್ಪರವರು ಅರ್ಧ ಅರ್ಧ ಭಾಗ ಮಾಡಿಕೊಂಡಿರುತ್ತಾರೆ. 3 ನೇ ಪ್ರತಿವಾದಿಗೆ ಸಾಲಹಳ್ಳಿರವರ ಮನೆತನದ ಹೆಣ್ಣುಮಗಳಾದ ಸೀತವ್ವಳನ್ನು ಮದುವೆ ಮಾಡಲಾಗಿರುತ್ತದೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ. 3 ನೇ ಪ್ರತಿವಾದಿಯು ತಾನು ಸಾಲಹಳ್ಳಿರವರ ಮನೆತನದ ಹೆಣ್ಣುಮಗಳನ್ನು ಮಾಡಿಕೊಂಡಿರುವುದರಿಂದ ದಾವಾ ಆಸ್ತಿಯು ತನಗೆ ಬರಬೇಕು ಎಂಬುದರ ಕುರಿತು ಯಾವುದೇ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಗಾಗಿ 3 ನೇ ಪ್ರತಿವಾದಿಯ ಪ್ರತಿವಾದವನ್ನು ಪರಿಗಣಿಸಲು ಬರುವುದಿಲ್ಲ.

25. **3** ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಮಸೂತಿ ಗ್ರಾಮದ ಸರ್ವೆ ನಂಃ **588/2** ಕ್ಷೇತ್ರ **4** ಎಕರೆ **16** ಗುಂಟೆ ಇದ್ದು, ಜಮೀನವು ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಆಸ್ತಿಯನ್ನು ತಮ್ಮ ತಂದೆಯು ವಾದಿ ಮತ್ತು **5**

ಮತ್ತು **6** ನೇ ಪ್ರತಿವಾದಿಯರ ಮದುವೆಯ ಸಲುವಾಗಿ ಮಾಡಿದ ಸಾಲ ತೀರಿಸುವುದಕ್ಕಾಗಿ ಮಾರಾಟ ಮಾಡಿದ್ದು ವಾದಿ ಹಾಗೂ **5** ಮತ್ತು **6** ನೇ ಪ್ರತಿವಾದಿಯರು ಮದುವೆ ಮಾಡುವ ಸಮಯದಲ್ಲಿ ಹಿರಿಯರು ಕೇಳಿದಷ್ಟು ಬಂಗಾರ ವರದಕ್ಷಿಣೆ ಕೊಟ್ಟು ಮದುವೆ ಮಾಡಲಾಗಿರುತ್ತದೆ ಮತ್ತು ವಾದಿ ಹಾಗೂ **5** ಮತ್ತು **6** ನೇ ಪ್ರತಿವಾದಿಯರು ಮದುವೆ ಮಾಡಿಕೊಳ್ಳುವ ಸಮಯದಲ್ಲಿ ತಮ್ಮ ಪಾಲಿಗೆ ಬರತಕ್ಕಂತ ಆಸ್ತಿಯನ್ನು ಮಾರಾಟ ಮಾಡಿ ಉಳಿದ ಆಸ್ತಿಯಲ್ಲಿ ತಾವು ಪಾಲು ಕೇಳುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು 3 ನೇ ಪ್ರತಿವಾದಿಯ ಪ್ರತಿವಾದವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು 3 ನೇ ಪ್ರತಿವಾದಿಯು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

26. ಪಿ.ಡಬ್ಲ್ಯು1 ರವರು ತಮ್ಮ ಪಾಟೀ ಸವಾಲಿನಲ್ಲಿ ಈ ದಾವೆಯಲ್ಲಿ ತಮ್ಮ ತಂದೆ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ತಾನು ನೋಡಿರುವುದಿಲ್ಲ. ತನ್ನ ತಂದೆಯು ತನ್ನ ಮತ್ತು 5 ಮತ್ತು 6 ನೇ ಪ್ರತಿವಾದಿಯರ ಮದುವೆಗಳ ಹಣದ ಖರ್ಚಿಗಾಗಿ ತನ್ನ ಅಜ್ಜನಿಂದ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತನ್ನ ಅಜ್ಜನಿಂದ ತನ್ನ ತಂದೆಗೆ ಒಟ್ಟು 5 ಎಕರೆ ಜಮೀನು ಬಂದಿತ್ತು ಎಂದರೆ ಸರಿ. ಸದರಿ 5 ಎಕರೆ ಜಮೀನಿನ ಪೈಕಿ 4 ಎಕರೆ ಜಮೀನನ್ನು ತನ್ನ ತಂದೆಯು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ 4 ಎಕರೆ ಜಮೀನನ್ನು ಮಾರಾಟ ಮಾಡಿರುವುದು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತನ್ನ ಮದುವೆಗೆ ತನ್ನ ತಂದೆಯು ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ. ಸಾಮಾನ್ಯವಾಗಿ ತನ್ನ ಮದುವೆಯ ಸಮಯದಲ್ಲಿ ಯಾವುದೇ ಒಂದು ಹೆಣ್ಣು ಮಗಳ ಮದುವೆ ಆಗಬೇಕಾದರೆ ಸುಮಾರು ರೂ.30-50 ಸಾವಿರ ಖರ್ಚು ಆಗುತ್ತಿತ್ತು. ತನ್ನ ಮದುವೆಯಾಗಿ ಸುಮಾರು 25 ವರ್ಷ ಆಗಿರಬಹುದು. 2010 ಕ್ಕಿಂತ ಪೂರ್ವದಲ್ಲಿ ಮಸೂತಿ ಗ್ರಾಮದ ಎಲ್ಲಾ ಜಮೀನುಗಳು ಮಡ್ಡಿ ಜಮೀನು ಆಗಿದ್ದವು ಎಂದರೆ ಸರಿ. ಸದರಿ 2010 ಕ್ಕಿಂತ

ಪೂರ್ವದಲ್ಲಿ ಮಡ್ಡಿ ಜಮೀನುಗಳಲ್ಲಿ ಹುಲ್ಲು ಮಾತ್ರ ಬೆಳೆಯುತ್ತಿತ್ತು ವಿನಹ ಯಾವುದೇ ಬೆಳೆ ಬೆಳೆಯುತ್ತಿರಲಿಲ್ಲ ಎಂದರೆ ಸರಿ.ದಾವಾ ಆಸ್ತಿಯು ಮಡ್ಡಿ ಜಮೀನು ಇರುತ್ತದೆ ಎಂದರೆ ಸರಿ. ಮೊದಲಿಗೆ ಮಡ್ಡಿ ಜಮೀನು ಇದ್ದಾಗ ಜಮೀನಿನ ಮೌಲ್ಯವು ಪ್ರತಿ ಎಕರೆಗೆ ರೂ.10-15 ಸಾವಿರ ಇತ್ತು ಎಂದರೆ ಸರಿ. ತನ್ನ ತಂದೆಯು ಜಮೀನನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ತನಗೆ ಗೊತ್ತಿಲ್ಲ. ತನಗೆ, 5 ಮತ್ತು 6 ನೇ ಪ್ರತಿವಾದಿಯರ ಮದುವೆಗಳಿಗೆ ರೂ.3-4 ಲಕ್ಷ ಹಣವನ್ನು ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ತನ್ನ ಮತ್ತು 6 ನೇ ಪ್ರತಿವಾದಿಯ ಮದುವೆಯು ಒಂದೇ ಸಮಯದಲ್ಲಿ ಆಗಿರುತ್ತದೆ. 6 ನೇ ಪ್ರತಿವಾದಿಯ ಮದುವೆಯು ಬಸವನ ಬಾಗೇವಾಡಿಯಲ್ಲಿ ಆಗಿರುತ್ತದೆ. 6 ನೇ ಪ್ರತಿವಾದಿಯ ಮದುವೆಗೆ ತನ್ನ ತಂದೆಯು ಸುಮಾರು ರೂ.30-50 ಸಾವಿರ ಖರ್ಚು ಮಾಡಿರಬಹುದು ಎಂದು ನುಡಿದಿರುತ್ತಾರೆ.

27. ಈ ಮೇಲಿನ ಪಿ.ಡಬ್ಲ್ಯೂ 1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಡಿ.ಡಬ್ಲ್ಯೂ1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಅಜ್ಜನಿಂದ ತನ್ನ ತಂದೆಗೆ ಒಟ್ಟು 5 ಎಕರೆ ಜಮೀನು ಬಂದಿತ್ತು . ಸದರಿ 5 ಎಕರೆ ಜಮೀನಿನ ಪೈಕಿ 4 ಎಕರೆ ಜಮೀನನ್ನು ತನ್ನ ತಂದೆಯು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ತನ್ನ ಮದುವೆಗೆ ತನ್ನ ತಂದೆಯು ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ . 2010 ಕಿಂತ ಪೂರ್ವದಲ್ಲಿ ಮಡ್ಡಿ ಜಮೀನಗಳಲ್ಲಿ ಯಾವುದೇ ಬೆಳೆ ಬೆಳೆಯುತ್ತೀರಲಿಲ್ಲ . ದಾವಾ ಆಸ್ತಿಯು ಮಡ್ಡಿ ಜಮೀನು ಇರುತ್ತದೆ. ಮೊದಲಿಗೆ ಮಡ್ಡಿ ಜಮೀನು ಇದ್ದಾಗ ಜಮೀನಿನ ಮೌಲ್ಯವು ಪ್ರತಿ ಎಕರೆಗೆ ರೂಃ10-15 ಸಾವಿರ ಇತ್ತು . ತನ್ನ ತಂದೆಯು ಜಮೀನನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ತನಗೆ ಗೊತ್ತೀಲ್ಲ. ತನ್ನ ಮತ್ತು 6 ನೇ ಪ್ರತಿವಾದಿಯ ಮದುವೆಯು ಒಂದೇ ಸಮಯದಲ್ಲಿ ಆಗಿರುತ್ತದೆ. 6 ನೇ ಪ್ರತಿವಾದಿಯ ಮದುವೆಯು ಬಸವನ ಬಾಗೇವಾಡಿಯಲ್ಲಿ ಆಗಿರುತ್ತದೆ. 6 ನೇ ಪ್ರತಿವಾದಿಯ ಮದುವೆಗೆ ತನ್ನ ತಂದೆಯು ಸುಮಾರು ರೂಃ30-40 ಸಾವಿರ ಖರ್ಚು ಮಾಡಿರಬಹುದು ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ.

28. ಡಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ಮನೆತನದ ಆಸ್ತಿ ಸರ್ವೆ ನಂಃ 558 ರ ಆಸ್ತಿಯು ಮಲಘಾಣ ಊರಿನವರ ಹೆಸರಿನಲ್ಲಿರುತ್ತದೆ. ಸದರಿ ಸರ್ವೇ ನಂ.558/2 ರ ಆಸ್ತಿಯನ್ನು ತನ್ನ ತಂದೆಯು ಮಾರಾಟ ಮಾಡಿರುತ್ತಾರೆ. ಸರ್ವೇ ನಂ.558/2 ರ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ತಮ್ಮ ಸಹೋದರಿಯರ ಮದುವೆಗಳನ್ನು ಮಾಡಿಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಮ್ಮ ಸಹೋದರಿಯರ ಮದುವೆಗಳು ಯಾವಾಗ ಆಗಿರುತ್ತದೆ ಎಂದು ತನಗೆ ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ. ತನ್ನ ಸಹೋದರಿಯರಿಗೆ ಬಂಗಾರವನ್ನು ಕೊಟ್ಟ ಬಗ್ಗೆ ಯಾವುದೇ ಬಂಗಾರದ ರಸೀದಿಗಳನ್ನು ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಾನು ತನ್ನ ಸಹೋದರಿಯರಿಗೆ ಯಾವುದೇ ಬಂಗಾರವನ್ನು ಕೊಡದೇ ಇದ್ದರೂ ಕೂಡಾ ಬಂಗಾರವನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

29. ಡಿ. ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ಮನೆತನದ ಆಸ್ತಿಯನ್ನು ತಮ್ಮ ತಂದೆಯು ಮಾರಾಟ ಮಾಡಿರುತ್ತಾರೆ. ಸದರಿ ತಮ್ಮ ಸಹೋದರಿಯರ ಮದುವೆಗಳು ಯಾವಾಗ ಆಗಿರುತ್ತದೆ ಎಂದು ತನಗೆ ನಿರ್ಧಿಷ್ಟ್ಯವಾಗಿ ಹೇಳಲು ಬರುವುದಿಲ್ಲ ಹಾಗೂ ತನ್ನ ಸಹೋದರಿಯರಿಗೆ ಬಂಗಾರವನ್ನು ಕೊಟ್ಟ ಬಗ್ಗೆ ಯಾವುದೇ ಬಂಗಾರದ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡು ಬರುತ್ತದೆ.

30. ಈ ಕುರಿತು 3 ನೇ ಪ್ರತಿವಾದಿಯು ತನ್ನ ಸಾಕ್ಷ್ಯಕ್ಕೆ ಪೂರಕವಾಗಿ ಸರ್ವೆ ನಂಃ 588/2 ರ ಆಸ್ತಿಯನ್ನು ಖರೀದಿ ಹಿಡಿದಿರುವ ಆಸ್ತಿಯ ಮಾಲೀಕರ ಮಗನನ್ನು ಡಿ.ಡಬ್ಲ್ಯೂ - 2 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿ ಡಿ. ಡಬ್ಲೂಃ2 ರವರು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಹಾಗೂ ಪ್ರತಿವಾದಿಯರ ಮನೆತನದ ಕೋಲ್ಹಾರ ತಾಲೂಕಿನ ಮಸೂತಿ ಗ್ರಾಮದ ಜಮೀನು ಸರ್ವೆ ನಂಃ 588/2 ಕ್ಷೇತ್ರ 04 ಎಕರೆ 16 ಗುಂಟೆ ತಮ್ಮ ತಂದೆಯವರು ವಾದಿ ಹಾಗೂ ಉಳಿದ 3 ನೇ

ಪ್ರತಿವಾದಿಯ ಸಹೋದರಿಯರ ಲಗ್ನದ ಸಲುವಾಗಿ ಅವರ ತಂದೆಯು ಸಾಲ ಮಾಡಿದ್ದು , ಆ ಸಾಲವನ್ನು ತೀರಿಸುವ ಸಲುವಾಗಿ ಸದರಿ ಜಮೀನನ್ನು ತಮ್ಮ ತಂದೆಯವರಿಗೆ ಮಾರಾಟ ಮಾಡಿದ್ದು ಇರುತ್ತದೆ. ಅದನ್ನು ತಮ್ಮ ತಂದೆಯವರು ಯೋಗ್ಯವಾದ ಬೆಲೆಯನ್ನು ಕೊಟ್ಟು ಪ್ರತಿವಾದಿಯ ತಂದೆ ಕಡೆಯಿಂದ ಖರೀದಿಸಿದ್ದು ಇರುತ್ತದೆ ಎಂದು ನುಡಿದಿರುವುದು ಕಂಡು ಬರುತ್ತದೆ.

31. ಡಿಡಬ್ಲ್ಯೂ-2 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನನ್ನು ಈ ದಿನ ನ್ಯಾಯಾಲಯಕ್ಕೆ 3 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾನೆ. ಈ ದಾವೆಯನ್ನು ಯಾರು ಯಾರ ಮೇಲೆ ಸಲ್ಲಿಸಿರುತ್ತಾರೆ ಮತ್ತು ಯಾವ ಆಸ್ತಿಯ ಕುರಿತು ಸಲ್ಲಿಸಿರುತ್ತಾರೆ ಎಂಬುದರ ಕುರಿತು ತನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ತನ್ನ ಪ್ರಮಾಣ ಪತ್ರದಲ್ಲಿ ಸರ್ವೇ ನಂ.588/2 ಕ್ಷೇತ್ರ 4 ಎಕರೆ 16 ಗುಂಟೆ ಆಸ್ತಿಯನ್ನು ತನ್ನ ತಂದೆಯು ಯಾವಾಗ ಖರೀದಿಸಿರುತ್ತಾರೆ ಎಂಬುದರ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯ ಸಹೋದರಿಯರ ಮದುವೆಯು ಯಾವಾಗ ಆಗಿರುತ್ತದೆ ಎಂಬುದರ ಕುರಿತು ತನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯು ಯಾರಿಂದ ಸಾಲವನ್ನು ಮಾಡಿರುತ್ತಾರೆ ಎಂಬುದರ ಕುರಿತು ತನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ ಎಂದು ನುಡಿದಿರುತ್ತಾರೆ.

32. ಡಿ.ಡಬ್ಲ್ಯೂ-2 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ 3 ನೇ ಪ್ರತಿವಾದಿಯ ಸಹೋದರಿಯರ ಮದುವೆ ಯಾವಾಗ ಆಗಿರುತ್ತದೆ ಎಂಬುದರ ಕುರಿತು ತನಗೆ ವೈಯಕ್ತಿಕ ಮಾಹಿತಿ ಇಲ್ಲ . 3 ನೇ ಪ್ರತಿವಾದಿ ಯಾರಿಂದ ಸಾಲ ಪಡೆದಿರುತ್ತಾನೆ ಎಂಬುದರ ಕುರಿತು ತನಗೆ ವೈಯಕ್ತಿಕ ಮಾಹಿತಿ ಇಲ್ಲ. ಸರ್ವೆ ನಂಃ 588/2 ರ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ 3 ನೇ ಪ್ರತಿವಾದಿ ಅವರ ತಂದೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಮಾಹಿತಿ ಇತ್ತು . 3 ನೇ ಪ್ರತಿವಾದಿ ಅವರ ತಂದೆ ಮತ್ತು ಅವರ ಕುಟುಂಬದ ಸದಸ್ಯರ ಎಲ್ಲರ ಒಪ್ಪಿಗೆ ಮೇರೆಗೆ ತನ್ನ ತಂದೆಯು ಸರ್ವೆ ನಂಃ 588/2 ರ

ಆಸ್ತಿಯನ್ನು ಖರೀದಿಸಿರುತ್ತಾರೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡು ಬರುತ್ತದೆ.

33. 3 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ಮಲಘಾಣ ಗ್ರಾಮದ ಸರ್ವೆ ನಂ፥ 588/2 ರ ಆಸ್ತಿಯನ್ನು ವಾದಿ ಮತ್ತು 5 ಮತ್ತು 6 ನೇ ಪ್ರತಿವಾದಿಯರ ಮದುವೆ ಸಾಲಕ್ಕಾಗಿ ಮಾರಾಟ ಮಾಡಲಾಗಿರುತ್ತದೆ ಮತ್ತು ಸದರಿ ವಾದಿ ಹಾಗೂ 5 ಮತ್ತು 6 ನೇ ಪ್ರತಿವಾದಿಯರು ತಮ್ಮ ಮದುವೆಗಾಗಿ ಸರ್ವೆ ನಂ፥ 588/2 ರ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ ತಮಗೆ ಉಳಿದ ಆಸ್ತಿಯಲ್ಲಿ ಯಾವುದೇ ಭಾಗ ಬೇಡ ಎಂದು ಹೇಳಿರುತ್ತಾರೆ ಎಂಬುದರ ಕುರಿತು ಯಾವುದೇ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯು ವಾದಿ ಹಾಗೂ 3 ರಿಂದ 6 ನೇ ಪ್ರತಿವಾದಿಯರ ಮದುವೆಗಳನ್ನು ಮಾಡಿರುವುದು ಕಂಡು ಬರುತ್ತದೆ. ವಾದಿ ಹಾಗೂ 5 ಮತ್ತು 6 ನೇ ಪ್ರತಿವಾದಿಯರ ಮದುವೆಯನ್ನು 1 ನೇ ಪ್ರತಿವಾದಿಯು ಮಾಡಿದ್ದರೂ ಸಹ ವಾದಿಯು ದಾವಾ ಆಸ್ತಿಯಲ್ಲಿ ಭಾಗ ಕೇಳಲು ಕಾನೂನಿನಲ್ಲಿ ಯಾವುದೇ ಪ್ರತಿಷೇದ ಇರುವುದಿಲ್ಲ. ಹಾಗಾಗಿ 3 ನೇ ಪ್ರತಿವಾದಿಯ ಪ್ರತಿವಾದವನ್ನು ಪರಿಗಣಿಸಲು ಬರುವುದಿಲ್ಲ.

34. **3** ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಮಸೂತಿ ಗ್ರಾಮದ ಸರ್ವೆ ನಂ፥ **308** ಕ್ಷೇತ್ರ **03** ಎಕರೆ ಜಮೀನವು ತಮ್ಮ ಪಿತ್ರಾರ್ಜಿತ ಆಸ್ತಿಯಾಗಿದ್ದು**,** ಈ ಕುರಿತು **1** ನೇ ಪ್ರತಿವಾದಿ ಮತ್ತು ಅವರ ಸಹೋದರ ಈರಪ್ಪರವರುಗಳು ಮಾನ್ಯ ಸಿವಿಲ್ ನ್ಯಾಯಾಲಯ ಬಾಗೇವಾಡಿರವರಲ್ಲಿ ಅಸಲು ದಾವೆ ಸಂಖ್ಯೆ **227/2011** ರಂತೆ ಕಲ್ಲಪ್ಪನ ಮಕ್ಕಳಾದ ರುದ್ರಪ್ಪ ಮತ್ತು ಈರಪ್ಪರವರುಗಳ ವಿರುದ್ದ ಪಾಲು ವಾಟ್ನಿ ಕೇಳಿ ದಾವೆ ಮಾಡಿದ್ದು **,** ಸದರಿ ದಾವೆಯು ದಿ፥ **21-06-2011** ರಂದು ರಾಜಿಯಾಗಿದ್ದು**,** ಸದರಿ ರಾಜಿಯ ಪ್ರಕಾರ **1** ಎಕರೆ ಜಮೀನವು ತಮ್ಮ ತಂದೆಯ ಪಾಲಿಗೆ ಬಂದಿರುತ್ತದೆ**.** ಸದರಿ ಜಮೀನನ್ನು ಕೂಡಗಿ ವಿದ್ಯುತ್ ಸ್ಥಾವರದವರು ಭೂ ಸ್ವಾಧೀನ

ಪಡಿಸಿಕೊಂಡಿದ್ದು , ಸದರಿ ಭೂ ಸ್ವಾಧೀನ ಪಡಿಸಿಕೊಂಡ ಪರಿಹಾರ ಹಣವನ್ನು ವಾದಿ **2, 5** ಮತ್ತು **6** ನೇ ಪ್ರತಿವಾದಿಯರು **1** ನೇ ಪ್ರತಿವಾದಿಯನ್ನು ಹೆದರಿಸಿ ಎಲ್ಲಾ ಹಣವನ್ನು ಅವರೇ ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು 3 ನೇ ಪ್ರತಿವಾದಿಯ ಪ್ರತಿವಾದವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು 3 ನೇ ಪ್ರತಿವಾದಿಯು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

35. ಪಿ.ಡಬ್ಲ್ಯೂ1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಮತ್ತು ಸದರಿ ದಾಖಲಾತಿಗಳಲ್ಲಿ ಬರೆದಿರುವ ಅಂಶಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ತನ್ನ ತಂದೆ ಮತ್ತು ತನ್ನ ದೊಡಪ್ಪ ಈರಪ್ಪ ಇಬ್ಬರೂ ಸೇರಿ ಕಲ್ಲಪ್ಪನ ಮಕ್ಕಳ ಮೇಲೆ ಅಸಲು ದಾವೆ ನಂ.227/2011 ರಂತೆ ಒಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಮಸೂತಿ ಗ್ರಾಮದ ಸರ್ವೇ ನಂ.308 ರ ಕ್ಷೇತ್ರ 3 ಎಕರೆ ತಲಾ ಒಂದೊಂದು ಎಕರೆ ಯಂತೆ ತನ್ನ ತಂದೆ, ತನ್ನ ದೊಡ್ಡಪ್ಪ ಮತ್ತು ತನ್ನ ಚಿಕ್ಕಪ್ಪನ ಮಕ್ಕಳು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ 3 ಎಕರೆ ಕೂಡಗಿ ಶಾಖೋತ್ಪನ ಕೇಂದ್ರಕ್ಕೆ ಭೂಸ್ವಾಧೀನವಾಗಿರುತ್ತದೆ ಎಂದರೆ ಸರಿ. ಸದರಿ ಭೂಸ್ವಾಧೀನವಾದ ಜಮೀನಿನ ಪರಿಹಾರದ ಹಣ ತನ್ನ ತಂದೆಯ ಖಾತೆಗೆ ಜಮಾವಾಗಿರುತ್ತದೆ ಎಂದರೆ ಸರಿ. ಸದರಿ ಹಣವನ್ನು ತನ್ನ ತಂದೆಯು ತನಗೆ ಮತ್ತು ಉಳಿದ ಹೆಣ್ಣು ಮಕ್ಕಳಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

36. ಈ ಮೇಲಿನ ಪಿ.ಡಬ್ಲ್ಯೂ-1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ತನ್ನ ತಂದೆ ಮತ್ತು ತನ್ನ ದೊಡ್ಡಪ್ಪ ಈರಪ್ಪರವರು ಸೇರಿ ಕಲ್ಲಪ್ಪನ ಮಕ್ಕಳ ಮೇಲೆ ಅಸಲು ದಾವೆ ಸಂಖ್ಯೆ 227/2011 ರಂತೆ ಒಂದು ದಾವೆಯನ್ನು ಸಲ್ಲಿಸಿದ್ದರು . ಸದರಿ ದಾವೆಯಲ್ಲಿ ಮಸೂತಿ ಗ್ರಾಮದ ಸರ್ವೆ ನಂಃ 308 ಕ್ಷೇತ್ರ 3 ಎಕರೆ ಜಮೀನನ್ನು ತಲಾ

ಒಂದೊಂದು ಎಕರೆಯಂತೆ ತನ್ನ ತಂದೆ, ತನ್ನ ದೊಡ್ಡಪ್ಪ ಮತ್ತು ತನ್ನ ಚಿಕ್ಕಪ್ಪನ ಮಕ್ಕಳು ಭಾಗ ಮಾಡಿಕೊಂಡಿರುತ್ತಾರೆ. ಸದರಿ 3 ಎಕರೆ ಕೂಡಗಿ ಶಾಖೋತ್ಪನ ಕೇಂದ್ರಕ್ಕೆ ಭೂಸ್ವಾಧೀನವಾಗಿರುತ್ತದೆ. ಸದರಿ ಭೂಸ್ವಾಧೀನವಾದ ಪರಿಹಾರದ ಹಣ ತನ್ನ ತಂದೆಯ ಖಾತೆಗೆ ಜಮಾವಾಗಿರುತ್ತದೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ.

37. ಡಿ.ಡಬ್ಲ್ಯೂ1 ರವರು ತಮ್ಮ ಪಾಟೀ ಸವಾಲಿನಲ್ಲಿ ಸರ್ವೆ ನಂಃ 308 ರ ಆಸ್ತಿಯು ಭೂ ಸ್ವಾಧೀನವಾಗಿರುತ್ತದೆ. ಸದರಿ ಭೂಸ್ವಾಧೀನವಾದ ಜಮೀನಕ್ಕೆ ಸಂಬಂಧಿಸಿದ ಚೆಕ್ ತನ್ನ ತಂದೆಯ ಹೆಸರಿನಲ್ಲಿ ಬಂದ್ದಿದ್ದವು. ಸದರಿ ಭೂಸ್ವಾಧೀನಾದಿಂದ ಬಂದ ಹಣವನ್ನು ತಮ್ಮ ತಂದೆಯು ತನಗೆ , ತನ್ನ ಸಹೋದರಿಯರು ಮತ್ತು ಸಹೋದರರಿಗೆ ತಲಾ ರೂ.1 ಲಕ್ಷದಂತೆ ಹಂಚಿರುತ್ತಾರೆ ಎಂದು ನುಡಿದಿರುತ್ತಾರೆ. ಡಿ. ಡಬ್ಲ್ಯೂ1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಸರ್ವೆ ನಂಃ 308 ರ ಆಸ್ತಿಯು ಭೂ ಸ್ವಾಧೀನವಾಗಿರುತ್ತದೆ . ಸದರಿ ಭೂ ಸ್ವಾಧೀನವಾದ ಜಮೀನಕ್ಕೆ ಸಂಬಂಧಿಸಿದ ಚೆಕ್ಕ ತನ್ನ ತಂದೆಯ ಹೆಸರಿನಲ್ಲಿ ಬಂದಿದ್ದವು ಮತ್ತು ಭೂ ಸ್ವಾಧೀನದಿಂದ ಬಂದ ಹಣವನ್ನು ತನ್ನ ತಂದೆಯು ತನಗೆ, ತನ್ನ ಸಹೋದರಿಯರು ಮತ್ತು ಸಹೋದರರಿಗೆ ತಲಾ ಒಂದು ಲಕ್ಷದಂತೆ ಹಂಚಿರುತ್ತಾರೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡು ಬರುತ್ತದೆ.

38. ಈ ಕುರಿತು ವಾದಿಯು ನಿಪಿ-5 ರಿಂದ 9 ರಂತೆ ಅಸಲು ದಾವೆ ಸಂಖ್ಯೆ 227/2011 ರ ಆದೇಶ ಪುಟದ , ವಾದ ಪತ್ರದ , ಜಂಟಿ ಮೇಮೋದ , ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ 23 ನಿಯಮ 3 ರ ಕೆಳಗೆ ಸಲ್ಲಿಸಿರುವ ರಾಜಿ ಅರ್ಜಿ ಮತ್ತು ರಾಜಿ ಡಿಕ್ರಿಯನ್ನು ಹಾಜರುಪಡಿಸಿದ್ದು , ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ ಈರಪ್ಪ ಬಸಪ್ಪ ಚನಗೊಂಡ ಮತ್ತು ಲಕ್ಷ್ಮಣ ತಂದೆ ಬಸಪ್ಪ ಚನಗೊಂಡರವರುಗಳು ರುದ್ರಪ್ಪ ತಂದೆ ಕಲ್ಲಪ್ಪ ಚನಗೊಂಡ , ಈರಪ್ಪ ಕಲ್ಲಪ್ಪ ಚನಗೊಂಡ ಮತ್ತು ವಿಶೇಷ ಭೂ ಸ್ವಾಧೀನ ಅಧಿಕಾರಿಗಳ ವಿರುದ್ದ ಪಾಲು ವಿಭಾಗ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ

ಪರಿಹಾರಗಳನ್ನು ಕೋರಿ ದಾವೆಯನ್ನು ಮಾನ್ಯ ಸಿವಿಲ್ ನ್ಯಾಯಾಲಯ ಬಸವನ ಬಾಗೇವಾಡಿರವರಲ್ಲಿ ಸಲ್ಲಿಸಿದ್ದು ಸದರಿ ದಾವೆಯಲ್ಲಿರುವ ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರು ರಾಜಿ ಅರ್ಜಿಯನ್ನು ಸಲ್ಲಿಸಿರುವುದು , ಸದರಿ ರಾಜಿ ಅರ್ಜಿಯ ಪ್ರಕಾರ ಸದರಿ ದಾವೆಯು ದಿ 21-06-2011 ರಂದು ರಾಜಿ ಡಿಕ್ರಿಯಾಗಿರುವುದು, ಸದರಿ ಡಿಕ್ರಿಯ ಪ್ರಕಾರ ಮಸೂತಿ ಗ್ರಾಮದ ಸರ್ವೆ ನಂಃ 308 ಕ್ಷೇತ್ರ 3 ಎಕರೆ ಜಮೀನಿನಲ್ಲಿ 1 ಎಕರೆ ಜಮೀನುವು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವುದು ಕಂಡು ಬರುತ್ತದೆ.

39. ಈ ಮೇಲಿನ ಪಿ.ಡಬ್ಲ್ಯೂ-1 ಮತ್ತು ಡಿ.ಡಬ್ಲ್ಯೂ-1 ರವರ ಮೌಖಿಕ ಸಾಕ್ಷ್ಯ ಮತ್ತು ನಿಪಿ-5 ರಿಂದ 9 ರ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮಸೂತಿ ಗ್ರಾಮದ ಸರ್ವೆ ನಂಃ 308 ಕ್ಷೇತ್ರ 3 ಎಕರೆ ಜಮೀನವು 1 ನೇ ಪ್ರತಿವಾದಿ ಮತ್ತು ಅವರ ಸಹೋದರರ ನಡುವೆ ಭಾಗವಾಗಿ 1 ನೇ ಪ್ರತಿವಾದಿಯ ಹಿಸ್ಸೆಗೆ ಸದರಿ ಜಮೀನನಲ್ಲಿ 1 ಎಕರೆ ಜಮೀನು ಬಂದಿದ್ದು, ಸದರಿ 1 ಎಕರೆ ಜಮೀನನ್ನು ಕೂಡಗಿ ವಿದ್ಯುತ್ ಸ್ಥಾವರದವರು ಭೂ ಸ್ವಾಧೀನ ಪಡಿಸಿಕೊಂಡಿದ್ದು, ಸದರಿ ಭೂ ಸ್ವಾಧೀನ ಪಡಿಸಿಕೊಂಡಿರುವ ಹಣವು 1 ನೇ ಪ್ರತಿವಾದಿಯ ಖಾತೆಗೆ ಜಮಾ ಆಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. 3 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಭೂ ಸ್ವಾಧೀನ ಪಡಿಸಿಕೊಂಡ ಜಮೀನಿನದ ಪರಿಹಾರದ ಎಲ್ಲಾ ಹಣವನ್ನು ವಾದಿ, 2, 5 ಮತ್ತು 6 ನೇ ಪ್ರತಿವಾದಿಯರು ತನ್ನ ತಂದೆಯನ್ನು ಹೆದರಿಸಿ ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಈ ಕುರಿತು 3 ನೇ ಪ್ರತಿವಾದಿಯು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದರೆ 3 ನೇ ಪ್ರತಿವಾದಿಯು ತನ್ನ ಪಾಟೀ ಸವಾಲಿನಲ್ಲಿ ಭೂ ಸ್ವಾಧೀನದಿಂದ ಬಂದ ಹಣವನ್ನು ತನ್ನ ತಂದೆಯು ತನಗೆ, ತನ್ನ ಸಹೋದರಿಯರು ಮತ್ತು ಸಹೋದರರಿಗೆ ತಲಾ ಒಂದೊಂದು ಲಕ್ಷದಂತೆ ಹಂಚಿರುತ್ತಾರೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ. ಹಾಗಾಗಿ 3 ನೇ ಪ್ರತಿವಾದಿಯ ತನ್ನ ಪ್ರತಿವಾದವನ್ನು ರುಜುವಾತು ಪಡಿಸಲು ವಿಫಲರಾಗಿರುತ್ತಾರೆ.

40. **3** ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ **1** ನೇ ಪ್ರತಿವಾದಿಯು ತನ್ನ ಜೀವಿತಾವಧಿಯಲ್ಲಿ ತನ್ನ ತಾಯಿಗೆ ಕೊಟ್ಟ ವಚನ ಉಳಿಸಿಕೊಳ್ಳುವ ಸಲುವಾಗಿ ವಾದಿ ಹಾಗೂ **2, 4** ರಿಂದ **6** ನೇ ಪ್ರತಿವಾದಿಯರಿಗೆ ಗೊತ್ತಾಗದ ಹಾಗೇ ದಾವಾ ಆಸ್ತಿಯನ್ನು ದಿನಾಂಕ **12-12-2019** ರಂದು ಮೃತ್ಯು ಪತ್ರದ ಮುಖಾಂತರ ತನಗೆ ಕೊಟ್ಟಿರುತ್ತಾರೆ**.** ನಂತರ ಮೃತ್ಯುಪತ್ರದ ಪ್ರಕಾರ ದಾವಾ ಆಸ್ತಿಗೆ ತಾನು ಮಾಲೀಕನಾಗಿರುತ್ತೇನೆ ಎಂದು ಆಧರಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಯ ಪರವಾಗಿ ದಿಃ 12-12-2019 ರಂದು ದಾವಾ ಆಸ್ತಿಯ ಕುರಿತು ಮೃತ್ಯು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂಬುವುದನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

41. ಪಿ. ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ತಂದೆಯು ದಿಃ 12-12-2019 ರಂದು 3 ನೇ ಪ್ರತಿವಾದಿಗೆ ದಾವಾ ಆಸ್ತಿಯ ಕುರಿತು ಮೃತ್ಯು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

42. ಡಿ.ಡಬ್ಲ್ಯೂ1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ತಂದೆಯು ಎಷ್ಟು ಮೊತ್ತದ ಬಾಂಡಿನ ಮೇಲೆ ಮೃತ್ಯು ಪತ್ರವನ್ನು ಬರೆದಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಮೃತ್ಯು ಪತ್ರವು ತನ್ನ ಮಾವನಾದ ಚನ್ನಪ್ಪ ಸಾಲಹಳ್ಳಿರವರ ಮನೆಯಲ್ಲಿಇರುತ್ತದೆ. ಸದರಿ ಮೃತ್ಯು ಪತ್ರವನ್ನು ಬರೆಯಲು ಬಾಂಡ್ ನ್ನು ತನ್ನ ತಂದೆಯ ಹೆಸರಿನಲ್ಲಿ ಖರೀದಿಸಿರುತ್ತಾರೆ. ಸದರಿ ಬಾಂಡ್ ನ್ನು ಎಲ್ಲಿ ಖರೀದಿಸಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ. ಸದರಿ ಮೃತ್ಯು ಪತ್ರವನ್ನು ಯಾರ ಸಮಕ್ಷಮದಲ್ಲಿ ಬರೆದಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ ಏಕೆಂದರೆ ತಾನು ಆ ಸಮಯದಲ್ಲಿ ಹಾಜರು ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ಮೃತ್ಯು ಪತ್ರವು ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೋಂದ ಆಗಿದೆಯೋ ಅಥವಾ ಇಲ್ಲವೋ ಎಂಬುದು ತನಗೆ

ಗೊತ್ತಿಲ್ಲ. ಸದರಿ ಮೃತ್ಯು ಪತ್ರವನ್ನು ತನ್ನ ಮಾವನು ಯಾವಾಗ ತನಗೆ ಕೊಟ್ಟಿರುತ್ತಾನೆ ಎಂದರೆ ತನಗೆ ಗೊತ್ತಿಲ್ಲ. ತನ್ನ ತಂದೆಯು ಸುಮಾರು 4-5 ವರ್ಷಗಳಿಂದ ಮೃತ ಪಟ್ಟಿರುತ್ತಾನೆ. ಸದರಿ ಮೃತ್ಯು ಪತ್ರದ ಪ್ರಕಾರ ತನ್ನ ಹೆಸರನ್ನು ದಾಖಲಿಸುವಂತೆ ತಹಶೀಲ್ದಾರ ಕಛೇರಿಗೆ ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. ವಾರಸಾ ಪ್ರಮಾಣ ಪತ್ರದಲ್ಲಿ ತನ್ನ, ವಾದಿ ಮತ್ತು ಉಳಿದ ಪ್ರತಿವಾದಿಯ ಹೆಸರುಗಳು ಬಂದಿರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ವಾರಸಾ ಪ್ರಮಾಣ ಪತ್ರಕ್ಕೆ ವಾದಿಯು ತಕರಾರು ಮಾಡಿರುತ್ತಾರೆ ಎಂದು ಹೇಳುತ್ತಾರೆ. ತನ್ನ ತಂದೆಯ ಮೃತ ಪಟ್ಟ ನಂತರ ವಾರಸಾ ಮಾಡುವಂತೆ ವಾದಿಯು ತಹಶೀಲ್ದಾರ ಕಛೇರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಾನು ಅದಕ್ಕೆ ತಕರಾರು ಮಾಡಿರುತ್ತೇನೆ ಎಂದು ಹೇಳುತ್ತಾರೆ. ತಾನು ಈ ದಾವೆಯಲ್ಲಿ ಸದರಿ ತಕರಾರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಾನು ಯಾವುದೇ ತಕರಾರನ್ನು ತಹಶೀಲ್ದಾರ ಕಛೇರಿಗೆ ಸಲ್ಲಿಸಿಲ್ಲ ಮತ್ತು ಸದರಿ ತಕರಾರಿನ ಪ್ರತಿಯನ್ನು ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಾನು ತಕರಾರನ್ನು ತಹಶೀಲ್ದಾರ ಕಛೇರಿಗೆ ಸಲ್ಲಿಸದೇ ಇರುವುದರಿಂದ ತಹಶೀಲ್ದಾರವರು ದಾವಾ ಆಸ್ತಿಯ ಕುರಿತು ವಾದಿ, ತನ್ನ ಮತ್ತು ಉಳಿದ ಪ್ರತಿವಾದಿಯರ ಹೆಸರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ತಾನು ತಹಶೀಲ್ದಾರ ಕಛೇರಿಗೆ ಮೃತ್ಯು ಪತ್ರವನ್ನು ಹಾಜರುಪಡಿಸಿರುತ್ತೇನೆ. ತಾನು ತಹಶೀಲ್ದಾರವರಿಗೆ ಮೃತ್ಯು ಪತ್ರದ ಮೂಲ ಪ್ರತಿಯನ್ನು ಕೊಟ್ಟಿರುತ್ತೇನೆ. ತನ್ನ ತಂದೆಯು ತನ್ನ ಹೆಸರಿಗೆ ಯಾವುದೇ ಮೃತ್ಯು ಪತ್ರವನ್ನು ಬರೆದು ಕೊಡದೇ ಇದ್ದರೂ ಕೂಡಾ ತನ್ನ ತಂದೆಯು ಮೃತ ಪಟ್ಟ ನಂತರ ಮೃತ್ಯು ಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿ ಅಸಲು ದಾವೆ ನಂ.357/2023 ರ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

43. ಈ ಕುರಿತು 3 ನೇ ಪ್ರತಿವಾದಿಯು ನಿಡಿ-1 ಮತ್ತು 2 ರಂತೆ ಅಸಲು ದಾವೆ ಸಂಖ್ಯೆ 357/2023 ರಲ್ಲಿಯ ವಾದ ಪತ್ರ ಮತ್ತು ಪ್ರತಿವಾದ ಪತ್ರದ ದೃಡಿಕೃತ ನಕಲುಗಳನ್ನು ಹಾಜರುಪಡಿಸಿದ್ದು , ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ದಾವೆಯಲ್ಲಿರುವ 3 ನೇ ಪ್ರತಿವಾದಿಯಾದ ದುಂಡಪ್ಪ ತಂದೆ ಲಕ್ಷ್ಮಣ ಚನಗೊಂಡರವರು ಗಂಗಾಬಾಯಿ ಗಂಡ ಲಕ್ಷ್ಮಣ ಚನಗೊಂಡ , ಗೌರಾಬಾಯಿ ಗಂಡ ಮಲ್ಲಿಕಾರ್ಜುನ ಗೂಳೆದಾರ , ರಾಮಣ್ಣ ತಂದೆ ಲಕ್ಷ್ಮಣ ಚನಗೊಂಡ , ಮಲ್ಲಕ್ಕ ಗಂಡ ಚಂದ್ರಶೇಖರ ಮಿಣಜಗಿ ಹಾಗೂ ದೇವಕಿ ಗಂಡ ಸಂಗನಗೌಡ ಬಗಲಿ ರವರುಗಳ ವಿರುದ್ದ ದಾವಾ ಆಸ್ತಿಯ ಕುರಿತು ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಬಸವನ ಬಾಗೇವಾಡಿರವರಲ್ಲಿ ದಾವೆ ಸಲ್ಲಿಸಿರುವುದು ಮತ್ತು ಸದರಿ ದಾವೆಯಲ್ಲಿ ಈ ಪ್ರಕರಣದಲ್ಲಿರುವ ವಾದಿಯಾದ ದೇವಕಿ ಗಂಡ ಸಂಗನಗೌಡ ಬಗಲಿರವರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದು ಕಂಡು ಬರುತ್ತದೆ.

44. ಈ ಮೇಲಿನ ಪಿ.ಡಬ್ಲ್ಯೂ-1 ಹಾಗೂ ಡಿ.ಡಬ್ಲ್ಯೂ-1 ರವರ ಮೌಖಿಕ ಮತ್ತು ನಿಡಿ-1 ಮತ್ತು 2 ರ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ 3 ನೇ ಪ್ರತಿವಾದಿಯು ತನ್ನ ತಂದೆಯು ತನ್ನ ಪರವಾಗಿ ದಿಃ 12-12-2019 ರಂದು ದಾವಾ ಆಸ್ತಿಯ ಕುರಿತು ಮೃತ್ಯು ಪತ್ರವನ್ನು ಸಾಕ್ಷಿದಾರರ ಸಮಕ್ಷಮದಲ್ಲಿ ಬರೆದುಕೊಟ್ಟಿರುತ್ತಾರೆ ಎಂದು ಹೇಳಿರುವುದು ಕಂಡು ಬರುತ್ತದೆ. ಪಿ.ಡಬ್ಲ್ಯೂ1 ರವರು ಸದರಿ ಮೃತ್ಯುಪತ್ರವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ಕುರಿತು 3 ನೇ ಪ್ರತಿವಾದಿಯು ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ ಬಾಗೇವಾಡಿರವರಲ್ಲಿ ಅಸಲು ದಾವೆ ಸಂಖೆಃ 357/2023 ರಂತೆ ದಾವಾ ಆಸ್ತಿಗೆ ಮೃತ್ಯು ಪತ್ರದ ಮೂಲಕ ತನ್ನನ್ನು ಮಾಲೀಕನೆಂದು ಘೋಷಿಸುವಂತೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಈ ದಾವೆಯಲ್ಲಿರುವ ವಾದಿ ಮತ್ತು ಉಳಿದ ಪ್ರತಿವಾದಿಯರ ವಿರುದ್ದ ಸಲ್ಲಿಸಿರುವುದು ಕಂಡು ಬರುತ್ತದೆ.

45. ಯಾವುದೇ ಒಬ್ಬ ವ್ಯಕ್ತಿಯು ಮೃತ್ಯುಪತ್ರದ ಪ್ರಕಾರ ದಾವಾ ಆಸ್ತಿಯನ್ನು ಪಡೆದಿದ್ದರೆ ಸದರಿ ಮೃತ್ಯುಪತ್ರದ ಮುಖಾಂತರ ಆಸ್ತಿಯನ್ನು ಪಡೆದ ವ್ಯಕ್ತಿಯು ಸದರಿ ಮೃತ್ಯುಪತ್ರವು ಕಾನೂನುಬದ್ದವಾಗಿದೆ ಎಂಬುದನ್ನು ರುಜುವಾತುಪಡಿಸುವ ಹೊಣೆಯು ಆತನ ಮೇಲೆಯೇ ಇರುತ್ತದೆ. ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯ ಕಲಂ **68** ನ್ನು ಮತ್ತು ಭಾರತೀಯ ಉತ್ತರಾಧಿಕಾರ ಅಧಿನಿಯಮ**,** **1925** ರ ಕಲಂ **63** ರ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ**.**

> **SECTION 68-** ***PROOF OF EXECUTION OF DOCUMENT REQUIRED BY LAW TO BE ATTESTED*;**
>
> **if** a document is required by law to be attested, it shall not be used in evidence, until one attesting witness at least has been called for the purpose of proving its execution, if there be an attesting witness alive, and subject to the process of the court and capable of giving evidence.
>
> Provided that it shall not be necessary to call an attesting witness in proof of the execution of any document, not being the will, which has been registered in accordance with then provision of Indian registration Act, unless its execution by the person by whom it purports to have been executed is specifically denied.

**Section 63 in The Indian Succession Act, 1925**

63 Execution of unprivileged Wills. —Every testator, not being a soldier employed in an expedition or engaged in actual warfare,[or an airman so employed or engaged,] or a mariner at sea, shall execute his Will according to the following rules:—

(a) The testator shall sign or shall affix his mark to the Will, or it shall be signed by some other person in his presence and by his direction.

(b) The signature or mark o*f the testator, or the sig*nature of the person signing for him, shall be so placed that it shall appear that it was intended thereby to give effect to the writing as a Will.

(C)The Will shall be attested by two or more witnesses, each of whom has seen the testator sign or affix his mark to the Will or has seen some other person sign the Will, in the presence and by the direction of the testator, or has received from the testator a personal acknowledgment of his signature or mark, or the signature of such other person; and each of the witnesses shall sign the Will in the presence of the testator, but it shall not be necessary that more than one witness be present at the same time, and no particular form of attestation shall be necessary.

**46.** ಈ ಮೇಲಿನ ಕಾನೂನಿನ ಪರಿಕಲ್ಪನೆಗಳ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಗಿನ ತೀರ್ಪುಜನ್ಯದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ.

**ILR 2008 Kar 2115 .Sri J.T. Surappa and Another *Versus* Sri Satchidhanandendra Saraswathi Swamiji Public Charitable Trust and Others**

(A) INDIAN SUCCESSION ACT, 1925 – SECTION 2(h) – Will – Proof of – Legal requirements – Duty of the Court – Five steps to be considered – HELD,under the Act, the Will to be valid, should be reduced into writing, signed by the testator and shall be attested by two or more witnesses and at least one attesting witnesses shall be examined. If these legal requirements are not found, in the eye of law there is no Will at all. Therefore, the first step is that if the documents produced before the Court prima facie do not satisfy these legal requirements, the Court need not make any further enquiry, in so far as its due execution is concerned and can negative a claim based on the said document – FURTHER HELD, The second step is that when the legal heirs are disinherited, the Court has to scrutinize the evidence with greater degree of care than usual – The third step would be to find out whether the testator was in a sound state of mind at the terms of executing the Will – The fourth step would be to find out whether there exists any suspicious circumstances surrounding the execution of the Will – The fifth step is to consider whether the Will that is

executing is in accordance with Section 63 of the Act read with Section 68 of the Evidence Act.

(B) INDIAN SUCCESSION ACT, 1925 — SECTION 63 R/W SECTION 68 — Execution of a Will under — Attestation and Execution — Procedure — HELD, The Will that is executed is in accordance with Section 63 of the Act read with Section 68 of the Evidence Act. The Will is a document required by law to be attested. The execution of Will must include both execution and attestation. "Attestation" and "execution" are different acts, one following the other. There can be no valid execution without due attestation, and if due attestation is not proved, the fact of execution is of no avail — The Court has to find out whether the Will bears the signature of the testator and the said signature is placed at a place with the intention of giving effect to the Will. Further the said Will has been attested by two witnesses and whether the witnesses have seen the testator affixing his signature to the Will in their presence and if not at least they receive from the testator a personal acknowledgment of his signature or mark and each of them shall sign the Will as attesting witness in the presence of the testator though it shall not be necessary that both of them should be present at the same time —FURTHER HELD, Section 68 of the Evidence Act deals with proof of execution of documents required by law to be attested. A Will is a document which requires to be attested under Section 63(c) of the Act. Therefore, the said document shall not be used as evidence until at least one attesting witness has been called for the purpose of proving its

> execution, if there be an attesting witness alive and subject to the process of the Court and capable of giving evidence. Whether such a Will is registered or not registered, in the eye of law it makes no difference. Even if the said Will is registered under the provisions of the Indian Registration Act, 1908 whether the execution of the Will is admitted or denied, it is necessary to call an attesting witness in proof of the execution of the said Will. Under no circumstances the proof of execution of the Will is dispensed with in law — It is only after the Court is satisfied that all these tests are successfully passed, the Court can declare that Will is executed in accordance with law, as such it is valid and enforceable.

47. ಈ ಮೇಲಿನ ಕಾನೂನಿನ ಪರಿಕಲ್ಪನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಯಾವುದೇ ಮೃತ್ಯುಪತ್ರವು ಬರವಣಿಗೆಯಲ್ಲಿ ಇರಬೇಕು ಮತ್ತು ವಿದಿಯ ಮೇರೆಗೆ ಒಂದು ದಾಸ್ತಾವೇಜನ್ನು ಅನುಪ್ರಮಾಣಗೊಳಿಸಬೇಕಾಗಿರುವಾಗ, ಅನುಪ್ರಮಾಣಗೊಳಿಸುವ ಒಬ್ಬ ಸಾಕ್ಷಿಯು ಜೀವಂತವಾಗಿದ್ದರೆ ಮತ್ತು ನ್ಯಾಯಾಲಯದ ಆದೇಶಕ್ಕೆ ಒಳಪಟ್ಟಿದ್ದರೆ ಮತ್ತು ಅವನ ಸಾಕ್ಷ್ಯವನ್ನು ಕೊಡಲು ಸಮರ್ಥನಾಗಿದ್ದರೆ ಅದನ್ನು ಬರೆದುಕೊಟ್ಟಿರುವುದನ್ನು ಸಾಭೀತುಮಾಡುವ ಉದ್ದೇಶಕ್ಕಾಗಿ ಕನಿಷ್ಟ ಪಕ್ಷ ಒಬ್ಬ ಅನುಪ್ರಮಾಣ ಸಾಕ್ಷಿಯನ್ನು ಕರೆಸುವವರೆಗೂ ಅದನ್ನು ಸಾಕ್ಷ್ಯವಾಗಿ ಉಪಯೋಗಿಸಕ್ಕದ್ದಲ್ಲ ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದರೆ ಈ ಪ್ರಸ್ತುತ ಪ್ರಕರಣದಲ್ಲಿ 3 ನೇ ಪ್ರತಿವಾದಿಯು ದಾವಾ ಆಸ್ತಿಯು ಮೃತ್ಯುಪತ್ರದ ಪ್ರಕಾರ ತನಗೆ ಬಂದಿರುತ್ತದೆ ಎಂದು ಹೇಳಿದರೂ ಕೂಡಾ ಸದರಿ ಮೃತ್ಯುಪತ್ರವನ್ನು 3 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ಯಾವುದೇ ಅನುಪ್ರಮಾಣ ಸಾಕ್ಷಿದಾರರ ಸಾಕ್ಷ್ಯವನ್ನು ಸಹ ಮಾಡಿಸಿರುವುದಿಲ್ಲ. ಹಾಗಾಗಿ 3 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ತನ್ನ ತಂದೆಯು ದಿನಾಂಕ 12.12.2019 ರಂದು ಮೃತ್ಯು ಪತ್ರದ ಮುಖಾಂತರ ನೀಡಿರುತ್ತಾರೆ ಎಂಬುದರ ಬಗ್ಗೆ

ಯಾವುದೇ ಮೌಖಿಕ ಸಾಕ್ಷ್ಯವನ್ನು ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಹಾಜರುಪಡಿಸಿರುವುದಿಲ್ಲ.

48. ಈ ಪ್ರಸ್ತುತ ದಾವೆಯಲ್ಲಿ ವಾದಿಯು ತಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯರು ಕೂಡ ತಮ್ಮ ಪ್ರತಿವಾದ ಪತ್ರದಲ್ಲಿ ತಮ್ಮ ಕುಟುಂಬದಲ್ಲಿ ವಿಭಾಗವಾಗಿರುವ ಕುರಿತು ಹೇಳಿರುವುದಿಲ್ಲ . ಹಾಗಾಗಿ ವಾದಿ ಹಾಗೂ ಪ್ರತಿವಾದಿಯರ ಕುಟುಂಬದಲ್ಲಿ ದಾವಾ ಆಸ್ತಿಯ ಕುರಿತು ವಿಭಾಗವಾಗಿರುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ .

49. ಈ ಮೇಲಿನ ವಿಸ್ತೃತ ಚರ್ಚೆಯಿಂದಾಗಿ ವಾದಿಯು ದಾವಾ ಅನುಸೂಚಿತ ಸ್ವತ್ತು ವಾದಿ ಮತ್ತು 2 ರಿಂದ 6 ನೇ ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು, ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಯಾವುದೇ ರೀತಿಯ ವಿಭಾಗವಾಗಿರುವುದಿಲ್ಲ ಎಂಬುದುನ್ನು ರುಜುವಾತು ಪಡಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. 3 ನೇ ಪ್ರತಿವಾದಿಯು ದಾವಾ ಆಸ್ತಿಯು ತನಗೆ ಮೃತ್ಯು ಪತ್ರದ ಪ್ರಕಾರ ಬಂದಿರುವುದರಿಂದ ತನ್ನ ಸ್ವಯಾರ್ಜಿತ ಸ್ವತ್ತು ಎಂಬುದನ್ನು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ವಿವಾದಾಂಶ ಸಂಖ್ಯೆ:1 ನ್ನು ವಾದಿಯರ ಪರವಾಗಿ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

50. <u>ವಿವಾದಾಂಶ **2** ಮತ್ತು **3**</u>**-** ಈ ಎರಡೂ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಎರಡೂ ವಿವಾದಾಂಶಗಳನ್ನು ಒಟ್ಟಿಗೆ ಚರ್ಚಿಸಲಾಗುತ್ತದೆ.

51. ವಾದಿಯು ದಾವಾ ಆಸ್ತಿಯಲ್ಲಿ ತನಗೆ 1/6 ನೇ ಭಾಗ ಬರಬೇಕೆಂದು ಕೋರಿರುತ್ತಾರೆ. ದಾವಾ ಆಸ್ತಿಯು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಹಾಗೂ ದಾವಾ ಆಸ್ತಿಯಲ್ಲಿ ವಿಭಾಗವಾಗಿರುವುದಿಲ್ಲ ಎಂಬುದನ್ನು ವಾದಿಯು ರುಜುವಾತು ಪಡಿಸಿರುತ್ತಾರೆ. ಎಂದು ಈ ನ್ಯಾಯಾಲಯವು ಈಗಾಗಲೇ ವಿವಾದಾಂಶ ಸಂಖ್ಯೆ1 ರಲ್ಲಿ

ನಿರ್ಣಯಿಸಲಾಗಿರುತ್ತದೆ. ಈ ಪ್ರಸ್ತುತ ಪ್ರಕರಣದಲ್ಲಿ ವಾದಿ ಮತ್ತು 3 ರಿಂದ 6 ನೇ ಪ್ರತಿವಾದಿಯರ ತಂದೆಯು ಈ ದಾವೆಯು ಚಾಲ್ತಿಯಲ್ಲಿರುವಾಗ ತೀರಿಕೊಂಡಿರುತ್ತಾರೆ. ವಾದಿ ಮತ್ತು 2 ರಿಂದ 6 ನೇ ಪ್ರತಿವಾದಿಯರು ದಾವಾಧೀತ್ವದ ಹಕ್ಕನ್ನು ಪಡೆಯಲು ಅರ್ಹರಾಗಿರುತ್ತಾರೆ. ಹಾಗಾಗಿ ವಾದಿ ಹಾಗೂ 2 ರಿಂದ 6 ನೇ ಪ್ರತಿವಾದಿಗಳು ಸಮನಾಗಿ ದಾವಾ ಆಸ್ತಿಯಲ್ಲಿ ಹಕ್ಕನ್ನು ಪಡೆಯಲು ಅರ್ಹರಿರುತ್ತಾರೆ. ಆದ್ದರಿಂದ ವಾದಿಯು ದಾವಾ ಆಸ್ತಿಯಲ್ಲಿ 1/6 ಅಂಶದ ಭಾಗಕ್ಕೆ ಹಾಗೂ 2 ರಿಂದ 6 ನೇ ಪ್ರತಿವಾದಿಯರು ಸಹ ತಲಾ 1/6 ಅಂಶದ ಭಾಗಕ್ಕೆ ಅರ್ಹರಿರುತ್ತಾರೆ. ಪ್ರತಿವಾದಿಯರು ತಮ್ಮ ಪಾಲಿನ ಭಾಗವನ್ನು ಪಡೆಯಬೇಕಾದರೆ ನ್ಯಾಯಾಲಯದ ಶುಲ್ಕವನ್ನು ಭರಿಸತಕ್ಕದ್ದು ಇರುತ್ತದೆ. ಹಾಗಾಗಿ ವಾದಿಯು ತನ್ನ ಪಾಲಿನ 1/6 ಅಂಶದ ಹಿಸ್ಸೆಯನ್ನು ಪಡೆಯಲು ಅರ್ಹರಿರುತ್ತಾರೆ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ. ಆದ್ದರಿಂದ ಈ ಮೇಲ್ಕಂಡ ಅಂಶಗಳನ್ನು ಚರ್ಚಿಸಿ ವಿವಾದಾಂಶ ಸಂಖ್ಯೆ 2 ಹಾಗೂ 3 ಗಳನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

**52.** <u>ವಿವಾದಾಂಶ ಸಂಖ್ಯೆ **4-**</u> ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆ ದೇ ಶ

ವಾದಿಯು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಲಾಗಿದೆ.

ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ 1/6 ಅಂಶ ಹಿಸ್ಸೆಯನ್ನು ಪಡೆಯಲು ಅರ್ಹರಿರುತ್ತಾರೆ.

2 ರಿಂದ 6 ನೇ ಪ್ರತಿವಾದಿಯರು ದಾವಾ ಅನುಸೂಚಿತ ಸ್ವತ್ತಿನಲ್ಲಿ ತಲಾ 1/6 ಅಂಶದ ಹಿಸ್ಸೆಯನ್ನು ಪಡೆಯಲು ಅರ್ಹರಿರುತ್ತಾರೆ.

ಪ್ರತಿವಾದಿಗಳು ತಮ್ಮ ಹಿಸ್ಸೆಯನ್ನು ಪಡೆಯಬೇಕಾದರೆ ನ್ಯಾಯಾಲಯದ ಶುಲ್ಕವನ್ನು ಭರಿಸತಕ್ಕದ್ದು.

ಈ ಮೇಲಿನಂತೆ ಪ್ರಾಥಮಿಕ ಡಿಕ್ರಿ ಬರೆಯತಕ್ಕದ್ದು.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ದಿನಾಂಕ 13.06.2022 ರ ಗೌರವಾನ್ವಿತ ಸರ್ವೋಚ್ಚ ನ್ಯಾಯಲಯದ ತೀರ್ಪು 2022 SCC Online SC 737 (Kattukandi Edathil Krishnan versus Kattukandi Edathil Valson) ಪ್ರಕಾರ ಸಿವಿಲ್ ಪ್ರಕ್ರಿಯ ಸಂಹಿತೆ ಆದೇಶ XX ನಿಯಮ 18 ರ ಅಡಿಯಲ್ಲಿ ಈ ದಾವೆಯ ಮುಂದುವರೆದ ಕ್ರಮಗಳನ್ನು ತೆಗೆದುಕೊಳ್ಳಲು ವಿಷಯವನ್ನು ಪಟ್ಟಿ ಮಾಡಿತಕ್ಕದ್ದು.

ಸಿ.ಐ.ಎಸ್. ನಲ್ಲಿನ ತಾಂತ್ರಿಕತೆಗಳನ್ನು ತಪ್ಪಿಸುವ ಸಲುವಾಗಿ ಹೊಸ ಸಂಖ್ಯೆ ನೀಡುವುದರ ಮೂಲಕ ಎಫ್.ಡಿ.ಪಿ. ಎಂದು ನೊಂದಾವಣೆ ಮಾಡಲು ಕಛೇರಿಗೆ ನಿರ್ದೇಶಿಸಿದೆ.

ಎಫ್.ಡಿ.ಪಿ. ಪ್ರಕರಣವನ್ನು ನ್ಯಾಯಾಲಯದಲ್ಲಿ 24.09.2026 ದಿನಾಂಕದಂದು ಕರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 27 ನೇ ಜೂನ 2026 ರಂದು ನಾನು ಉದ್ಘೋಷಿಸಿದ್ದೇನೆ.)

**(ಈರಪ್ಪ ಢವಳೇಶ್ವರ್)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.,ಬಸವನ ಬಾಗೇವಾಡಿ .

## ಅನುಬಂಧ

**ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

ಪಿ.ಡಬ್ಲೂ.1- ದೇವಕಿ ಗಂಡ ಸಂಗನಗೌಡ ಬಗಲಿ

**ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

ನಿ.ಪಿ.1 - ಪಹಣಿ ಪತ್ರಿಕೆ
ನಿ.ಪಿ.2-4 - ಮುಟ್ಯೆಶನ ರಜಿಸ್ಟರನ ದೃಡಿಕೃತ ನಕಲು
ನಿ.ಪಿ.5-9 - ಅಸಲು ದಾವೆ ನಂ: 227 /2011 ರ ಆದೇಶ ಪುಟ, ದಾವಾ ಪತ್ರ ದೃಡಿಕೃತ ನಕಲು , ಮೆಮೋ , ರಾರ್ಜಿ ಅರ್ಜಿಯ ಮತ್ತು ರಾಜಿ ಡಿಕ್ರಿಯ ದೃಡಿಕೃತ ನಕಲುಪ್ರತಿಗಳು

**ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

ಡಿ.ಡಬ್ಲೂ.1 - ದುಂಡಪ್ಪ ತಂದೆ ಲಕ್ಷ್ಮಣ ಚನಗೊಂಡ
ಡಿ.ಡಬ್ಲೂ.2 - ವಿಠ್ಠಲ ತಂದೆ ಗಿರಿಯಪ್ಪ ನಿಂಗನೂರು

**ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

ನಿಡಿ.1 - ಅಸಲು ದಾವೆ ನಂ: 357 /2023 ರ ವಾದ ಪತ್ರದ ದೃಡಿಕೃತ ನಕಲು
ನಿಡಿ.2 - ಅಸಲು ದಾವೆ ನಂ: 357 /2023 ರ ಪ್ರತಿವಾದ ಪತ್ರದ ದೃಡಿಕೃತ ನಕಲು
ನಿಡಿ-3 - ಪಹಣಿ ಪತ್ರಿಕೆ

**(ಈರಪ್ಪ ಢವಳೇಶ್ವರ್)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಬಸವನ ಬಾಗೇವಾಡಿ